ದಶಮಾನೋತ್ಸವ ವರ್ಷ

# ಸ್ವಾಭಿಮಾನಿ ಸಹಕಾರಿ

ಸೌಹಾರ್ದ ಸಹಕಾರಿ ಚಳುವಳಿಯ ಅಭಿವೃದ್ಧಿಗೆ ಮೀಸಲಾಗಿರುವ ಏಕೈಕ ಮಾಸಪತ್ರಿಕೆ

ಸ್ವಾಯತ್ತತೆ,
ಸ್ವಯಂ ಆಡಳಿತ,
ಸ್ವಯಂ ನಿಯಂತ್ರಣ
ನಮ್ಮ ಧ್ಯೇಯ

ಸಂಪುಟ 8 : ಸಂಚಿಕೆ 4 : ಏಪ್ರಿಲ್ 2011 : * ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ * ವಾರ್ಷಿಕ ಚಂದಾ 50/– : ಬೆಲೆ ₹ 5

## ಜಿಲ್ಲಾ ಜಂಗಮ ಅಭಿವೃದ್ಧಿ ಸೌಹಾರ್ದ ಸಹಕಾರಿ ಉದ್ಘಾಟನೆ

ದಾವಣಗೆರೆಯಲ್ಲಿ ಜಿಲ್ಲಾ ಜಂಗಮ ಅಭಿವೃದ್ಧಿ ಸೌಹಾರ್ದ ಸಹಕಾರಿಯ ಉದ್ಘಾಟನೆಯನ್ನು ಮುಖ್ಯಮಂತ್ರಿ ಶ್ರೀ ಬಿ.ಎಸ್. ಯಡಿಯೂರಪ್ಪ ನೆರವೇರಿಸಿದ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಶ್ರೀ ಎಸ್.ಎ. ರವೀಂದ್ರನಾಥ್, ಲೋಕಸಭಾ ಸದಸ್ಯ ಶ್ರೀ ಜಿ.ಎಂ. ಸಿದ್ದೇಶ್, ಲೋಕೋಪಯೋಗಿ ಸಚಿವ ಶ್ರೀ ಸಿ.ಎಂ. ಉದಾಸಿ ಮುಂತಾದವರು ಹಾಜರಿದ್ದರು.






ಮೂಡುಬಿದಿರೆಯಲ್ಲಿ ಶ್ರೀ ಪೇಜಾವರ ಶ್ರೀಗಳಿಂದ ವಂದೇ ಮಾತರಂ ವಿವಿಧೋದ್ದೇಶ ಸೌಹಾರ್ದ ಸಹಕಾರಿ ಉದ್ಘಾಟನೆ

ತುಮಕೂರು ಜಿಲ್ಲಾ ಬಂಜಾರ ಪತ್ತಿನ ಸೌಹಾರ್ದ ಸಹಕಾರಿಯ ಪ್ರಥಮ ವಾರ್ಷಿಕ ಮಹಾ ಸಭೆಯ ಉದ್ಘಾಟನೆಯನ್ನು ಶ್ರೀ ಶ್ರೀ ಶ್ರೀ ಸರ್ದಾರ್ ಸೇವಾಲಾಲ್ ಸ್ವಾಮಿಗಳು ನೆರವೇರಿಸಿದರು.



ಜೀವನ ಬೇವು ಬೆಲ್ಲ
ಬಲ್ಲಾತಗೆ ನೋವೇ ಇಲ್ಲ...





ಎಸ್.ಆರ್.ಸತೀಶಚಂದ್ರ
ಅಧ್ಯಕ್ಷರು

### ಅಧ್ಯಕ್ಷ – ಉಪಾಧ್ಯಕ್ಷರಾಗಿ ಮರು ಆಯ್ಕೆ

ನಾಡಿನ ಸಮಸ್ತ ಜನತೆಗೆ
ಯುಗಾದಿ ಹಬ್ಬದ ಶುಭಾಶಯಗಳು

ಸೌಹಾರ್ದ ಸಂಯುಕ್ತ ಸಹಕಾರಿ
ಆಡಳಿತ ಮಂಡಳಿ



ಗುರುನಾಥ ಜ್ಯಾಂತಿಕರ
ಉಪಾಧ್ಯಕ್ಷರು

ಒಳಪುಟಗಳಲ್ಲಿ...

ಅಧ್ಯಕ್ಷರ ನುಡಿ....................2
ಸೌಹಾರ್ದ ಸಹಕಾರಿಗಳ ಸಮಾಚಾರಗಳು....................3,4,5
ನೂತನ ಆಡಳಿತ ಮಂಡಳಿ....................6,7
ನಿಮ್ಮ ಪ್ರಶ್ನೆ ನಮ್ಮ ಉತ್ತರ....................8,9
ಶಾಸನಬದ್ಧ ಲೆಕ್ಕ ಪರಿಶೋಧನೆ....................10,11
ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಪ್ರಗತಿ....................12

ಸೌಹಾರ್ದ ಸಹಕಾರಿಗಳ ಸಂಖ್ಯೆ : 1642 - 'ಇ' ಸ್ಟಾಂಪಿಂಗ್ ಕೇಂದ್ರಗಳ ಸಂಖ್ಯೆ - 350



# ಅಧ್ಯಕ್ಷರ ನುಡಿ....

ರಾಜ್ಯ ಸರಕಾರವು ಸೌಹಾರ್ದ ಸಹಕಾರಿಗಳಿಗೆ ಇ-ಸ್ಟಾಂಪಿಂಗ್ ಕಾರ್ಯನಿರ್ವಹಿಸುವ ಪ್ರಪ್ರಥಮ ಜವಾಬ್ದಾರಿಯನ್ನು ವಹಿಸಿಕೊಟ್ಟು ಇಡೀ ವಿಶ್ವದಲ್ಲಿಯೇ ಸಹಕಾರ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿಗಳಿಗೆ ವಿಶ್ವಮಾನ್ಯತೆ ಬಂದಂತಾಗಿದೆ. ಭಾರತೀಯ ರಿಸರ್ವ್ ಬ್ಯಾಂಕಿನವರಿಂದ ಕ್ರೆಡಿಟ್ ಸಹಕಾರಿಗಳಿಗೆ ಥರ್ಡ ಪಾರ್ಟಿಯ ರೂ 50.000 ಗಳ ಮೊತ್ತದ ವರೆಗಿನ ಚೆಕ್ಕುಗಳನ್ನು ಕಲೆಕ್ಷ್‌ಮಾಡುವ ಅವಕಾಶ ಕೊಟ್ಟಿರುವುದು ಒಂದು ವಿಶೇಷ ಮಾನ್ಯತೆ ಎನಿಸಿದೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಅವಕಾಶಗಳನ್ನು ಸೌಹಾರ್ದ ಸಹಕಾರಿಗಳಿಗೊದಗಿಸುವುದಾಗಿ ರಾಜ್ಯ ಸರಕಾರ ಹಾಗೂ ರಿಸರ್ವ್ ಬ್ಯಾಂಕಿನವರು ತಿಳಿಸಿರುವುದು ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ.

## ನೂತನ ಆರ್ಥಿಕ ವರ್ಷ :

# ಹೊಸ ಯೋಜನೆಗಳ ಅನುಷ್ಠಾನಕ್ಕೆ ಸಂಕಲ್ಪ ಅಗತ್ಯ.

ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಯುಗಾದಿಯ ಶುಭಾಶಯಗಳು. ಖರ ಸಂವತ್ಸರವು ತಮಗೆಲ್ಲ ಶುಭವನ್ನುಂಟುಮಾಡಲಿ ಎಂದು ಹಾರೈಸುತ್ತೇನೆ, ಹೊಸ ವರುಷಕೆ ಹೊಸ ಹರುಷವ ತರುವ ಈ ಯುಗಾದಿಯಂದು ಜೀವನದಲ್ಲಿ ಸಿಹಿ ಹಾಗೂ ಕಹಿಗಳನ್ನು ಸಮನಾಗಿ ಸ್ವೀಕರಿಸುವ ಸ್ವಭಾವವನ್ನು ಬೆಳೆಸಿಕೊಳ್ಳುವ ಒಬ್ಬರಿಗೊಬ್ಬರು ಶುಭ ಹಾರೈಸುವ ಸುಸಮಯವಾಗಿದೆ. ನವ ಉತ್ಸಾಹದೊಂದಿಗೆ ಸಹಕಾರಿಯನ್ನು ಮುನ್ನಡೆಸುವ ಸಂಕಲ್ಪವನ್ನು ಮಾಡಿ ಮುಂದೆ ಸಾಗೋಣ.

ವರ್ಷ 2010–11 ಕಳೆದಿದೆ. ಹೊಸ ಆರ್ಥಿಕ ವರ್ಷಕ್ಕೆ ಕಾಲಿರಿಸಿದ್ದೇವೆ. ಹೊಸ ಆರ್ಥಿಕ ವರ್ಷದಲ್ಲಿ ತಮಗೆ ಎಲ್ಲ ರೀತಿಯ ಶುಭ ಹಾರೈಸುತ್ತೇನೆ. ಕಳೆದ ವರ್ಷದಲ್ಲಿ ಅನುಷ್ಠಾನಗೊಳಿಸಿದ ಯೋಜನೆಗಳು, ಅದರಿಂದಾಗಿ ಸಹಕಾರಿಯ ಆರ್ಥಿಕ ಪ್ರಗತಿ, ಗಳಿಸಿದ ಲಾಭ, ಸದಸ್ಯರಿಗೆ ಒದಗಿಸಿದ ಸೌಲಭ್ಯಗಳು, ಮುಂಬರುವ ವರ್ಷಗಳಲ್ಲಿ ಸಹಕಾರಿಯ ವ್ಯಾಪ್ತಿಯಲ್ಲಿರುವ ಅವಕಾಶಗಳು, ಜಾರಿಮಾಡಬಹುದಾದ ಯೋಜನೆಗಳು, ಸದಸ್ಯರಿಗೆ ಒದಗಿಸಬಹುದಾದ ಹೆಚ್ಚುವರಿಯಾದ ಸೌಲಭ್ಯಗಳು, ಸಂಪನ್ಮೂಲಗಳ ಕ್ರೋಢೀಕರಣದ ಕ್ರಮಗಳು, ಎಲ್ಲವನ್ನೂ ಪರಾಮರ್ಶಿಸಿ ಕಾರ್ಯಯೋಜನೆ ಸಿದ್ಧಪಡಿಸುವ ಹಾಗೂ ಕಳೆದ ವರ್ಷದ ಲೆಕ್ಕಪರಿಶೋಧನೆಗೆ ಸಿದ್ಧವಾಗುವ ಕಾಲವಿದು.

ಸೌಹಾರ್ದ ಸಹಕಾರ ಚಳುವಳಿಗೆ ರಾಜ್ಯದ ಸಹಕಾರ ಕ್ಷೇತ್ರದಲ್ಲಿ ವಿಶೇಷ ಸ್ಥಾನಮಾನ ಹಾಗೂ ಗೌರವಗಳು ಪ್ರಾಪ್ತವಾಗುತ್ತಿರುವದು ಸಂತೋಷಕರ. ರಾಜ್ಯ ಸರಕಾರವು ಸೌಹಾರ್ದ ಸಹಕಾರಿಗಳಿಗೆ ಇ–ಸ್ಟಾಂಪಿಂಗ ಕಾರ್ಯನಿರ್ವಹಿಸುವ ಪ್ರಪ್ರಥಮ ಜವಾಬ್ದಾರಿಯನ್ನು ವಹಿಸಿಕೊಟ್ಟು ಇಡೀ ವಿಶ್ವದಲ್ಲಿಯೇ ಸಹಕಾರ ಕ್ಷೇತ್ರದಲ್ಲಿ ಸೌಹಾರ್ದ ಸಹಕಾರಿಗಳಿಗೆ ವಿಶ್ವಮಾನ್ಯತೆ ಬಂದಂತಾಗಿದೆ. ಭಾರತೀಯ ರಿಸರ್ವ್ ಬ್ಯಾಂಕಿನವರಿಂದ ಕ್ರೆಡಿಟ್ ಸಹಕಾರಿಗಳಿಗೆ ಥರ್ಡ ಪಾರ್ಟಿಯ ರೂ 50.000ಗಳ ಮೊತ್ತದ ವರೆಗಿನ ಚೆಕ್ಕುಗಳನ್ನು ಕಲೆಕ್ಷ್‌ಮಾಡುವ ಅವಕಾಶ ಕೊಟ್ಟಿರುವುದು ಒಂದು ವಿಶೇಷ ಮಾನ್ಯತೆ ಎನಿಸಿದೆ. ಮುಂಬರುವ ದಿನಗಳಲ್ಲಿ ಇನ್ನೂ ಹೆಚ್ಚಿನ ಅವಕಾಶಗಳನ್ನು ಸೌಹಾರ್ದ ಸಹಕಾರಿಗಳಿಗೊದಗಿಸುವುದಾಗಿ ರಾಜ್ಯ ಸರಕಾರ ಹಾಗೂ ರಿಸರ್ವ್ ಬ್ಯಾಂಕಿನವರು ತಿಳಿಸಿರುವುದು ಸ್ವಾಗತಾರ್ಹ ಹಾಗೂ ಸಂತೋಷದ ವಿಷಯ.

ಈ ಅವಕಾಶಗಳ ಸದುಪಯೋಗ ಮಾಡಿಕೊಂಡು ಸಹಕಾರಿಗಳು ಹೊಸ ಹೊಸ ಕಾರ್ಯಕ್ರಮಗಳ ಅನುಷ್ಠಾನಗೊಳಿಸುವ ಸಮಯ ಇದಾಗಿದೆ. ಕೇವಲ ಠೇವಣಿ ಸಂಗ್ರಹಣೆಗೆ ಹಾಗೂ ಸಾಲ ವಿತರಣೆಗಳಿಗೆ ಮೀಸಲಾಗಿರದೆ ಬಡ್ಡಿಯೇತರ ಆದಾಯಗಳು, ಸದಸ್ಯರಿಗೆ ಹೆಚ್ಚಿನ ಸೌಕರ್ಯವನ್ನು ಒದಗಿಸುವ ಅನೇಕ ಕಾರ್ಯಕ್ರಮಗಳನ್ನು ಜಾರಿಗೊಳಿಸಲು ಕ್ರಮವಿಡಬೇಕಾಗಿದೆ.

ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರ ಕಾರ್ಯಾಚರಣೆ ಯಶಸ್ವಿಯಾಗಿ 10 ವರ್ಷಗಳನ್ನು ಪೂರೈಸಿ ಈಗ 11 ನೇ ವರ್ಷಕ್ಕೆ ಕಾಲಿರಿಸಿದೆ. ಸಹಕಾರಿಗಳು ಉತ್ತಮವಾಗಿ ನಿರೀಕ್ಷಿಸಿದ ಗುಣಮಟ್ಟವನ್ನು ಕಾಯ್ದುಕೊಂಡು ಸದಸ್ಯರಿಗೆ ಉತ್ತಮ ರೀತಿಯ ಸೌಲಭ್ಯಗಳನ್ನು ಒದಗಿಸುತ್ತಿವೆ. ಈ ಸೌಹಾರ್ದ ಸಹಕಾರಿ ಕ್ಷೇತ್ರ ಇನ್ನೂ ಹೆಚ್ಚು ಗುಣಾತ್ಮಕವಾಗಿ ಹಾಗೂ ಸಂಖ್ಯಾತ್ಮಕವಾಗಿ ಬೆಳೆಯಲು ಅವಕಾಶಗಳಿವೆ. ಸೌಹಾರ್ದ ಸಹಕಾರಿಗಳು ಈ ಅವಕಾಶಗಳನ್ನು ಉಪಯೋಗಿಸಿಕೊಂಡು ಕ್ರಿಯಾಶೀಲರಾಗಿ ಬೆಳೆಯಲು ಹೊಸ ಹೊಸ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಪ್ರಗತಿಯನ್ನು ಸಾಧಿಸುತ್ತೀರೆಂದು ಆಶಿಸುತ್ತೇನೆ.

ಎಸ್.ಆರ್.ಸತೀಶಚಂದ್ರ
ಅಧ್ಯಕ್ಷರು.

# ಶ್ರೀ ಎಸ್.ಆರ್.ಸತೀಶಚಂದ್ರ ಅಧ್ಯಕ್ಷರಾಗಿ, ಶ್ರೀ ಗುರುನಾಥ ಜ್ಯಾಂತಿಕರ ಉಪಾಧ್ಯಕ್ಷರಾಗಿ ಮರು ಆಯ್ಕೆ





ದಿನಾಂಕ 31-3-2011ರಂದು ನಡೆದ ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯ ಸಭೆಯಲ್ಲಿ ಸಂಯುಕ್ತ ಸಹಕಾರಿಯ ಅಧ್ಯಕ್ಷರಾಗಿ ಎರಡನೇ ಬಾರಿಗೆ ಶ್ರೀ ಎಸ್ಆರ್.ಸತೀಶಚಂದ್ರ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಗುರುನಾಥ ಜ್ಯಾಂತಿಕರ್ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

ಪದಾಧಿಕಾರಿಗಳ ಆಯ್ಕೆಗಾಗಿ ಸೇರಿದ್ದ ಪ್ರಥಮ ಆಡಳಿತ ಮಂಡಳಿ ಸಭೆಯ ಅಧ್ಯಕ್ಷತೆಯನ್ನು ಹಿರಿಯ ನಿರ್ದೇಶಕರಾದ ಶ್ರೀ ರಾವಸಾಹೇಬ ಪಾಟೀಲ್‌ರವರು ವಹಿಸಿದ್ದರು. ಸಭೆಯಲ್ಲಿ ಪ್ರಾರಂಭದ ಪೂರ್ವದಲ್ಲಿ ಸಂಯುಕ್ತ ಸಹಕಾರಿಯ ಅಧಿಕಾರಿಗಳು ನೂತನವಾಗಿ ಆಯ್ಕೆಯಾಗಿರುವ ಎಲ್ಲ ನಿರ್ದೇಶಕರನ್ನು ಸ್ವಾಗತಿಸಿ ಪರಸ್ಪರ ಪರಿಚಯ ಕಾರ್ಯಕ್ರಮ ನೆರವೇರಿಸಿದರು.

ಸಭೆಯಲ್ಲಿ ನಿರ್ದೇಶಕರುಗಳಾದ ಶ್ರೀ ಬಿ. ಶಿವರುದ್ರಪ್ಪ, ಶ್ರೀ ನಾಗೇಂದ್ರ ಗುಪ್ತ, ಶ್ರೀಮತಿ ಆರ್.ನಾಗರತ್ನ, ಶ್ರೀ ಎಮ್. ಕೆ. ಸೋಮಯ್ಯ, ಶ್ರೀ ರವಿಕುಮಾರ, ಶ್ರೀ ಕೆ.ಸಣ್ಣಸೂಗಪ್ಪ, ಶ್ರೀ ಬಿ.ಹೆಚ್. ಕೃಷ್ಣಾರೆಡ್ಡಿ, ಶ್ರೀ ಹೆಚ್.ಪಿ.ರಾಜೀವ,ಶ್ರೀ ಎಮ್.ಬಿ.ಕಲಾಲ ರವರುಗಳು ನೂತನ ಪದಾಧಿಕಾರಿಗಳನ್ನು ಅಭಿನಂದಿಸಿ ಮಾತನಾಡಿದರು. ಹಾಗೂ ಸಂಯುಕ್ತ ಸಹಕಾರಿಯ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಸೌಹಾರ್ದ ಸಹಕಾರಿ ಕ್ಷೇತ್ರದ ಅಭಿವೃದ್ಧಿಯ ಬಗ್ಗೆ ಸಂಪೂರ್ಣ ಸಹಕಾರ ನೀಡುವುದಾಗಿ ತಿಳಿಸಿದರು.

ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ್ ತಾವು ಈ ಮೊದಲು ಸೇವೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ವಿಶ್ವಾಸದಿಂದ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿ ಮತ್ತೊಮ್ಮೆ ಉಪಾಧ್ಯಕ್ಷನನ್ನಾಗಿ ಆಯ್ಕೆ ಮಾಡಿರುವುದಕ್ಕೆ ಕೃತಜ್ಞತೆಯನ್ನು ಸಲ್ಲಿಸಿದರು.

ಅಧ್ಯಕ್ಷರಾಗಿ ಆಯ್ಕೆಗೊಂಡ ಶ್ರೀ ಎಸ್.ಆರ್. ಸತೀಶ ಚಂದ್ರರವರು ತಮ್ಮನ್ನು ಎರಡನೇ ಬಾರಿಗೆ ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆಮಾಡಿರುವುದಕ್ಕೆ ಎಲ್ಲ ನಿರ್ದೇಶಕರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತ ರಾಜ್ಯದಲ್ಲಿ ಸೌಹಾರ್ದ ಸಹಕಾರಿ ಚಳುವಳಿಯನ್ನು ಹುಟ್ಟು ಹಾಕಲು ಪ್ರಯತ್ನಿಸಿದ ಹಿಂದೆ ಸಹಕಾರ ಮಂತ್ರಿಗಳಾಗಿದ್ದ ಶ್ರೀ ಎಸ್. ಎಸ್. ಪಾಟೀಲರವರನ್ನು, ಮಾಜಿ ರಾಜ್ಯಪಾಲ ಹಾಲಿ ರಾಜ್ಯಸಭಾಸದಸ್ಯ ಶ್ರೀ ರಾಮಾಜೋಯಿಸ್‌ರವರನ್ನು, ಡಾ ಕುರಿಯನ್‌ರವರನ್ನು, ಸ್ಥಾಪಕ ಹಾಗೂ ಹಿಂದಿನ ಅಧ್ಯಕ್ಷರುಗಳಾದ ಶ್ರೀ ಮನೋಹರ ಮಸ್ಕಿಯವರನ್ನು, ಶ್ರೀ ವಿಶ್ವನಾಥ ಹಿರೇಮಠರವರನ್ನು ಹಾಗೂ ಸಂಯುಕ್ತ ಸಹಕಾರಿಯ ಬೆಳವಣಿಗೆಗೆ ಅವರ ಕೊಡುಗೆಯನ್ನು ಸ್ಮರಿಸುತ್ತ ಈ ಕ್ಷೇತ್ರದ ಅಭಿವೃದ್ಧಿ ನಿರೀಕ್ಷಿಸಿದ ಮಟ್ಟಿಗೆ ಆಗಿಲ್ಲ ಸಾಧಿಸಬೇಕಾದುದು ಸಾಕಷ್ಟಿದೆ.

ಬೆಳವಣಿಗೆಯ ವೇಗವನ್ನು ಹೆಚ್ಚಿಸುವ ಗುಣಾತ್ಮಕ ಚಳುವಳಿಯ ಅಭಿವೃದ್ಧಿಯ ಜವಾಬ್ದಾರಿ ನಮ್ಮ ಮೇಲಿದೆ. ಇದಕ್ಕಾಗಿ ರಾಜ್ಯದ ಎಲ್ಲ ಸಹಕಾರಿಗಳ ಹಾಗೂ ವಿಶೇಷವಾಗಿ ಎಲ್ಲ ನಿರ್ದೇಶಕರ ಸಹಕಾರ ಕೋರಿದರು.

# ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ನೂತನ ಪದಾಧಿಕಾರಿಗಳ ಆಯ್ಕೆ

ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿ ನಿ., ಮಸ್ಕಿ ಇದರ 2011-2012 ರಿಂದ 2015-2016 ರ ಐದು ಸಹಕಾರಿ ವರ್ಷಗಳ ಅವಧಿಗೆ ದಿನಾಂಕ: 14.03.2011ರಂದು ನಡೆದ ಆಡಳಿತ ಮಂಡಳಿಯ ಪದಾಧಿಕಾರಿಗಳ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಡಾ.ಶಿವಶರಣಪ್ಪ ಇತ್ಲಿ ಹಾಗೂ ಉಪಾಧ್ಯಕ್ಷರಾಗಿ ಶ್ರೀ ಶರಣಪ್ಪ ಹುಲ್ಲೂರು ಅವಿರೋಧವಾಗಿ ಆಯ್ಕೆಯಾಗಿರುತ್ತಾರೆ. ನಿರ್ದೇಶಕರಾದ ಶ್ರೀ ಪಂಪಣ್ಣ ಗುಂಡಳ್ಳಿ, ಶ್ರೀ ದಯಾನಂದ ಜೋಗಿನ್, ಶ್ರೀ ಬಸವರಾಜ ಉದ್ಬಾಳ, ಶ್ರೀ ಮಂಜುನಾಥ ಬಿಜ್ಜಳ, ಶ್ರೀ ಪಾರ್ಶ್ವನಾಥ ಕೋಲ್ಹಾರ, ಶ್ರೀ ಮಲ್ಲಪ್ಪ ವಡ್ಡರ, ಹಾಗೂ ಶ್ರೀಮತಿ ನಿರ್ಮಲಾ ಧಾರಿವಾಲ ಅವರು ಸಭೆಯಲ್ಲಿ ಹಾಜರಿದ್ದರು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಮಂಜುನಾಥ ಬಿಜ್ಜಳ ವಹಿಸಿಕೊಂಡಿದ್ದರು. ಮತ್ತು ಶ್ರೀ ವೀರೇಶ ಹಿರೇಮಠ ಮುಖ್ಯಕಾರ್ಯನಿರ್ವಾಹಕರು ಉಪಸ್ಥಿತರಿದ್ದರು.

ಹೈದ್ರಾಬಾದ-ಕರ್ನಾಟಕದಲ್ಲಿ ಪ್ರಪ್ರಥಮ ಶಾಖೆ ಪ್ರಾರಂಭಿಸಿದ ಕೀರ್ತಿ ಹೊಂದಿದ ಮತ್ತು ಪ್ರಸ್ತುತ 4 ಶಾಖೆ ಹೊಂದಿದ ಶ್ರೀ ಭ್ರಮರಾಂಬ ಪತ್ತಿನ ಸೌಹಾರ್ದ ಸಹಕಾರಿಯು ರೂ.1 ಕೋಟಿ ಶೇರು ಬಂಡವಾಳವನ್ನು, 4179 ಸದಸ್ಯರನ್ನು, ರೂ.22 ಕೋಟಿ



ಠೇವಣಿಯನ್ನು, ಹಾಗೂ ಸದಸ್ಯರಿಗೆ ರೂ.20 ಕೋಟಿ ವಿವಿಧ ರೀತಿಯ ಸಾಲ ವಿತರಿಸಿದ್ದು, ರೂ.25 ಕೋಟಿ ದುಡಿಯುವ ಬಂಡವಾಳ ಹೊಂದಿದೆ. ಸಹಕಾರಿಯು ಗ್ರಾಹಕರಿಗಾಗಿ RTGS/ NEFT, PAY-ORDER ಸೇವೆ ನೀಡುತ್ತಿದ್ದು, ಆಕ್ಸಿಸ್ ಬ್ಯಾಂಕ ಸಹಯೋಗದೊಂದಿಗೆ ATM Card ವಿತರಿಸುವ ಹಾಗೂ METLIFE INSURANCE CO. ಜೊತೆ ಹೊಂದಾಣಿಕೆ ಮಾಡಿಕೊಂಡು ವಿಮೆ ಸೌಲಭ್ಯವನ್ನು ಗ್ರಾಹಕರಿಗೆ ಏಪ್ರಿಲ್-2011 ತಿಂಗಳಿನಿಂದ ನೀಡಲು ಉದ್ದೇಶಿಸಿದೆ.

# ಪೂತ್ತೂರಿನ ಸರಸ್ವತಿ ಸೌಹಾರ್ದ ಪತ್ತಿನ ಸಹಕಾರಿ ಪದಾಧಿಕಾರಿಗಳ ಮರು ಆಯ್ಕೆ

ಸರಸ್ವತಿ ಸೌಹಾರ್ದ ಪತ್ತಿನ ಸಹಕಾರಿ ನಿ ಪೂತ್ತೂರು ಇದರ ಪದಾಧಿಕಾರಿಗಳ ಆಯ್ಕೆಯ ಪ್ರಥಮ ಆಡಳಿತ ಮಂಡಳಿ ಸಭೆಯು ದಿನಾಂಕ 28-3-2011 ಅಧ್ಯಕ್ಷರಾಗಿ ಶ್ರೀ ಎಸ್.ಆರ್.ಸತೀಶಚಂದ್ರ ರವರು ಹಾಗೂ ಉಪಾಧ್ಯಕ್ಷರಾಗಿ ಶ್ರೀ ಕೆ.ವಿನಯಕುಮಾರ ರವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ.

# ಸಿಂಧನೂರಿನ ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯಲ್ಲಿ ವಿನೂತನ ಪ್ರಯೋಗ ಆಕ್ಸಿಸ್ ಬ್ಯಾಂಕ್ ಸಹಯೋಗದೊಂದಿಗೆ ಡೆಬಿಟ್ ಕಾರ್ಡ್ ಸೇವೆ ಪ್ರಾರಂಭ







ಆಧುನಿಕ ಜಗತ್ತಿನಲ್ಲಿ ಡೆಬಿಟ್ ಕಾರ್ಡ್ ಅಥವಾ ಕ್ರೆಡಿಟ್ ಕಾರ್ಡ್ ಹೊಂದುವುದು ಅನಿವಾರ್ಯವಾಗುತ್ತಿರುವ ಸಂದರ್ಭದಲ್ಲಿ ಸಿಂಧನೂರಿನ ಶ್ರೀ ಬಸವೇಶ್ವರ ಪತ್ತಿನ ಸೌಹಾರ್ದ ಸಹಕಾರಿಯು ಆಕ್ಸಿಸ್ ಬ್ಯಾಂಕ್‌ನ ಸಹಯೋಗದಲ್ಲಿ ರಾಜ್ಯದಲ್ಲಿಯೆ ಮೊದಲ ಬಾರಿಗೆ ಸಹಕಾರಿಯೊಂದು ಈ ಕಾರ್ಯದಲ್ಲಿ ಮೊದಲ ಹೆಜ್ಜೆಯಲ್ಲಿಟ್ಟಿರುವುದು ಶ್ಲಾಘನಿಯವಾದ ಕಾರ್ಯವಾಗಿದೆ ಎಂದು ಮಾಜಿ ಶಾಸಕ ಶ್ರೀ ಹಂಪನಗೌಡ ಬಾದರ್ಲಿ ಎಂದು ಸದಸ್ಯರಿಗೆ ಡೇಬಿಟ್ ಕಾರ್ಡ್ ವಿತರಿಸಿ ಹೇಳಿದರು.

ಹೈದರಾಬಾದ ಕರ್ನಾಟಕದಲ್ಲಿ ಅತ್ಯಂತ ಪ್ರಭಲವಾಗಿ ಬೆಳೆದಿರುವ ಸಂಸ್ಥೆಯು ಹೆಚ್ಚು ಜನಪಯೋಗಿ ಕಾರ್ಯಗಳನ್ನು ಹಮ್ಮಿಕೊಳ್ಳುವಂತೆ ಸಲಹೆ ನೀಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸ್ಥಳೀಯ ಆಕ್ಸಿಸ್ ಬ್ಯಾಂಕ್‌ನ ವ್ಯವಸ್ಥಾಪಕರಾದ ಶ್ರೀ ಗೋವಿಂದರಾಜ್ ಅವರು ಮಾತನಾಡಿ ಎಲ್ಲಾ ಸೇವೆಗಳು ಒಂದೆ ಸೂರಿನಲ್ಲಿ ನಡೆಸುವ ದಿನಗಳ ಬಂದಿರುವ ಈ ದಿನಗಳಲ್ಲಿ ಡೆಬಿಟ್ ಕಾರ್ಡ್ ಬಳಕೆಯ ಬಗ್ಗೆ ಮಾಹಿತಿ ನೀಡಿದರು.

ಪ್ರಸ್ತಾವಿಕವಾಗಿ ಮಾತನಾಡಿದ ಸಹಕಾರಿಯ ಮುಖ್ಯ ಕಾರ್ಯನಿರ್ವಾಹಕರಾದ ಶ್ರೀ ಬಿ ರಾಜಶೇಖರ ಅವರು ಸಹಕಾರಿಯು ಸದಸ್ಯರ ಅನುಕೂಲಕ್ಕೆ ಅಗತ್ಯವಿರುವ ಅನೇಕ ನೂತನ ಸೇವೆಗಳನ್ನು ಆರಂಭಿಸುತ್ತಿರುವ ಬಗ್ಗೆ ಮಾಹಿತಿ ನೀಡಿ ಕೇಂದ್ರ ಸರ್ಕಾರ ದೇಶದ ಪ್ರತಿಯೊಬ್ಬ ಪ್ರಜೆಯು ಬ್ಯಾಂಕಿಂಗ್ ಸೇವೆಯನ್ನು ಪಡೆದುಕೊಳ್ಳಬೇಕೆಂಬ ಸದುದ್ದೇಶದಿಂದ ಅನೇಕ ಸೇವೆಗಳನ್ನು ಆರಂಭಿಸಿರುವುದಕ್ಕೆ ಪೂರಕವಾಗಿ ಸಹಕಾರಿಯು ತನ್ನ ಸದಸ್ಯರ ಅನುಕೂಲಕ್ಕಾಗಿ ಮುಂದಿನ ದಿನಗಳಲ್ಲಿ ಆರಂಭಿಸಲಿರುವ ಸೇವೆಗಳ ಬಗ್ಗೆ ಮಾಹಿತಿ ನೀಡಿದರು.

ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಸಹಕಾರಿಯ ಅಧ್ಯಕ್ಷರಾದ ಶ್ರೀ ಸಿದ್ದರಾಮಪ್ಪ ಮಾಡಶಿರವಾರ ಅವರು ಮಾತನಾಡಿ ಸಹಕಾರಿಯು ಆರಂಭಿಸಿರುವ ನೂತನ ಸೇವೆಗಳನ್ನು ಸದಸ್ಯರು ಬಳಸುವಂತೆ ಮನವಿ ಮಾಡಿಕೊಂಡರು.

ಸಭೆಯಲ್ಲಿ ಸಹಕಾರಿಯ ಉಪಾಧ್ಯಕ್ಷರಾದ ಶ್ರೀ ಸಿಂಹಾದ್ರಿ ಸತ್ಯನಾರಾಯಣ, ನಿರ್ದೇಶಕರಾದ ಶ್ರೀ ಅಮರೇಗೌಡ ವಿರುಪಾಪುರ, ಶ್ರೀಮತಿ ಎಂ.ಆರ್. ಲೀಲಾವತಿ, ಶ್ರೀ ಜಯಂತಿಲಾಲ ಜೈನ್, ರುದ್ರಗೌಡ, ಶ್ರೀ ಈ ರಾಘಣ್ಣ, ಆರಂಭದಲ್ಲಿ ಶ್ರೀ ಭಾವುರಾವ ಕುಲ್ಕರ್ಣಿ ಸ್ವಾಗತಿಸಿ ನಂತರ ವಂದಿಸಿದರು.

## ಚಿತ್ರದುರ್ಗದ ದಿ ಮರ್ಚೆಂಟ್ಸ್ ಸೌಹಾರ್ದ ಸಹಕಾರಿ ಬ್ಯಾಂಕಿಗೆ 144.12 ಲಕ್ಷ ರೂ. ನಿವ್ವಳ ಲಾಭ

ಚಿತ್ರದುರ್ಗದ ದಿ ಮರ್ಚೆಂಟ್ಸ ಸೌಹಾರ್ದ ಸಹಕಾರಿ ಬ್ಯಾಂಕು ತೆರಿಗೆ ಪಾವತಿಸಿದ ನಂತರ ನಿವ್ವಳ ರೂ 144.12 ಲಕ್ಷ ನಿವ್ವಳ ಲಾಭ ಗಳಿಸಿದೆಯೆಂದು ಬ್ಯಾಂಕಿನ ಅಧ್ಯಕ್ಷ ಶ್ರೀ ಲಕ್ಷ್ಮೀಕಾಂತ ರೆಡ್ಡಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಮುಕುಂದರಾವ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಈ ಬ್ಯಾಂಕು ಸತತ 6 ವರ್ಷಗಳಿಂದ ಸತತವಾಗಿ '0' ಅನುತ್ಪಾದಕ ಆಸ್ತಿ ಪ್ರಮಾಣವನ್ನು ಕಾಯ್ದುಕೊಂಡು ಬಂದಿರುವಲ್ಲಿ ಯಶಸ್ಸು ಸಾಧಿಸುತ್ತಿದೆ.



## ಮೈಸೂರಿನಲ್ಲಿ ಇ–ಸ್ಟ್ಯಾಂಪಿಂಗ್ ಆರಂಭ

ಪರಿವರ್ತನ ವಿವಿಧೋದ್ದೇಶ ಮಹಿಳಾ ಸೌಹಾರ್ದ ಸಹಕಾರಿ ನಿ., ವತಿಯಿಂದ ಮೈಸೂರಿನ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ವಕೀಲರ ಸಂಘದಲ್ಲಿ ಇ–ಸ್ಟ್ಯಾಂಪಿಂಗ್ ಸೌಲಭ್ಯ ಆರಂಭಗೊಂಡಿದೆ.



ದಾವಣಗೆರೆಯ ಜಿಲ್ಲಾ ಜಂಗಮ ಅಭಿವೃದ್ಧಿ ಸೌಹಾರ್ದ ಸಹಕಾರಿ ನಿ., ಆಡಳಿತ ಕಚೇರಿ ಉದ್ಘಾಟನೆ ಸಂದರ್ಭದಲ್ಲಿ ಪದಾಧಿಕಾರಿಗಳು.



ಸರ್ವೋದಯ ಗ್ರಾಮ ವಿಕಾಸ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚಂದಾಪುರ, ಹಾವೇರಿ. ವತಿಯಿಂದ ವಿಶ್ವ ಮಹಿಳಾ ದಿನಾಚರಣೆ ಆಚರಣೆ.




ದಿನಾಂಕ : 01.04.2011ರಂದು ಹೊಸ ಆರ್ಥಿಕ ವರ್ಷದ ಪ್ರಾರಂಭದಲ್ಲಿ ಸೌಹಾರ್ದ ಸಹಕಾರಿ ಕ್ಷೇತ್ರದ ಸಾಧನೆ ಹಾಗೂ ಯೋಜನೆಗಳ ಕುರಿತು ಬೆಂಗಳೂರಿನ ಪ್ರೆಸ್ ಕ್ಲಬ್‌ನಲ್ಲಿ ಪತ್ರಿಕಾಗೋಷ್ಠಿ ನಡೆಸಲಾಯಿತು. ಸಂಯುಕ್ತ ಸಹಕಾರಿ ಅಧ್ಯಕ್ಷ ಶ್ರೀ ಎಸ್.ಆರ್. ಸತೀಶ್‌ಚಂದ್ರ, ನಿರ್ದೇಶಕರಾದ ಶ್ರೀಮತಿ ನಾಗರತ್ನ ಹಾಗೂ ಶ್ರೀ ವೈ.ಟಿ. ಪಾಟೀಲ ಮತ್ತು ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ ಇತರರು ಇದ್ದಾರೆ.

## ಹೊಸದುರ್ಗದ ಶ್ರೀ ಸೀತಾರಾಘವ ಸೌಹಾರ್ದ ಸಹಕಾರ ಬ್ಯಾಂಕ್ ನಿ.,ಗೆ ಅವಿರೋಧ ಆಯ್ಕೆ



ಶ್ರೀ ಹಂಜಿ ಶಿವಸ್ವಾಮಿ
ಅಧ್ಯಕ್ಷರು



ಶ್ರೀ ಡಿ. ಆದಿರಾಜಯ್ಯ
ಉಪಾಧ್ಯಕ್ಷರು

## ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್ ನಿ.,ಗೆ ಸರ್ವಾನುಮತದ ಆಯ್ಕೆ



ಶ್ರೀ ಸದಾಶಿವರೆಡ್ಡಿ
ಅಧ್ಯಕ್ಷರು



ಶ್ರೀ ಪಿ. ಜಯರಾಮರೆಡ್ಡಿ
ಉಪಾಧ್ಯಕ್ಷರು

## ಸಂಯುಕ್ತ ಸಹಕಾರಿಗೆ ಗಣ್ಯರ ಭೇಟಿ



ಸಂಯುಕ್ತ ಸಹಕಾರಿಯ ನೂತನ ಕಛೇರಿಗೆ ವಿಧಾನ ಮಂಡಲದ ಕಾರ್ಯದರ್ಶಿ ಶ್ರೀ ಭರತೇಶ ಅವರ ಭೇಟಿ.



ಹೂವಿನ ಹಡಗಲ್ಲಿಯ ಶ್ರೀ ಗುರು ಚರಂತೇಶ್ವರ ಸ್ವಾಮೀಜಿ, ನಂದೀಪುರ ಅವರ ಸಂಯುಕ್ತ ಸಹಕಾರಿಯ ನೂತನ ಕಛೇರಿಗೆ ಭೇಟಿ.

"ಸಂಯುಕ್ತ ಸಹಕಾರಿಯ ನೂತನ ಕೇಂದ್ರ ಕಚೇರಿ ವಿಳಾಸ"


ಸಂಯುಕ್ತ ಸಹಕಾರಿಯು ತನ್ನ ಕಚೇರಿಯನ್ನು "ಇ-ಸ್ಟಾಂಪಿಂಗ್ ವಿಭಾಗವೂ ಸೇರಿದಂತೆ ಪೂರ್ಣ ಪ್ರಮಾಣದಲ್ಲಿ ಈ ವಿಳಾಸಕ್ಕೆ ಬದಲಾಯಿಸಿ ಕಾರ್ಯಾಚರಣೆಯನ್ನು ಪ್ರಾರಂಭ ಮಾಡಿದೆ. ಸಹಕಾರಿಗಳು ಹಾಗೂ ಸಾರ್ವಜನಿಕರು ಗಮನಿಸಲು ಕೋರಿದೆ.

**ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,**

# ನಿರ್ಮಾಣ ಭವನ ಆವರಣ , ಡಾ. ರಾಜಕುಮಾರ ರಸ್ತೆ
(ವಿವೇಕಾನಂದ ಕಾಲೇಜು ಎದುರು)
ಒಂದನೇ ಬ್ಲಾಕ್ ರಾಜಾಜಿನಗರ ಬೆಂಗಳೂರು-560010
ದೂ.ಸಂ : 23378375/76/77/78/79/80 ಹಾಗೂ 23474408, 23573291

### ಕೃತಜ್ಞತೆ

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿ ಚುನಾವಣೆ ದಿನಾಂಕ : 16-3-2011 ರಂದು ಬೆಂಗಳೂರಿನಲ್ಲಿ ಸುಸೂತ್ರವಾಗಿ ನಡೆಯಲು ಸಹಕರಿಸಿದ ರಾಜ್ಯದ ಎಲ್ಲ ಸೌಹಾರ್ದ ಸಹಕಾರಿಗಳಿಗೆ ಸಂಯುಕ್ತ ಸಹಕಾರಿಯ ಆಡಳಿತ ಮಂಡಳಿಯು ಕೃತಜ್ಞತೆ ಸಲ್ಲಿಸುತ್ತದೆ.


ಎಸ್. ಜಿ. ಜೋಶಿ

ರಾಜ್ಯದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಸಭೆಯಲ್ಲಿ ನಡೆದ ಪ್ರಶ್ನೋತ್ತರ ಅಧಿವೇಶನದಲ್ಲಿನ ಆಯ್ದ ಕೆಲವು ಪ್ರಶ್ನೆಗಳಿಗೆ ಉತ್ತರಗಳನ್ನು, ಎಲ್ಲ ಸೌಹಾರ್ದ ಸಹಕಾರಿಗಳ ಮಾಹಿತಿ ಹಾಗೂ ಅನುಕೂಲತೆಗಾಗಿ ಪ್ರಕಟಿಸಲಾಗಿದೆ. "ಕಲಂ" ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ರ ಕಲಂ, "ನಿಯಮ" ಎಂದರೆ ಕರ್ನಾಟಕ ಸೌಹಾರ್ದ ಸಹಕಾರಿ ನಿಯಮಗಳು 2004ರ ನಿಯಮಗಳು ಎಂದು ಓದಿಕೊಳ್ಳತಕ್ಕದ್ದು.


ಶ್ರೀಕಾಂತ್ ಬರುವೆ

ಉತ್ತರಿಸಿದವರು : ಶ್ರೀ ಎಸ್.ಜಿ. ಜೋಶಿ, ಸಹಕಾರ ಸಂಘಗಳ ಸಹಾಯಕ ನಿಬಂಧಕರು, ವಸೂಲಿ ಅಧಿಕಾರಿ, ರೆಡ್ಡಿ ಸಹಕಾರ ಬ್ಯಾಂಕ್, ಧಾರವಾಡ
ನೆರವು : ಶ್ರೀ ಕಾಂತ್ ಬರುವೆ, ಕಾನೂನು ವಿಭಾಗದ ಅಧಿಕಾರಿ, ಸಂಯುಕ್ತ ಸಹಕಾರಿ.

# ನಿಮ್ಮ ಪ್ರಶ್ನೆ ನಮ್ಮ ಉತ್ತರ




**ಪ್ರಶ್ನೆ : ಒಂದು ಸಹಕಾರಿಯ ಚುನಾವಣೆ ಮಾರ್ಚ 2011 ಕ್ಕೆ ಜರುಗಲಿದೆ. ಈ ಚುನಾವಣೆಗಾಗಿ ಅರ್ಹ ಮತದಾರರಪಟ್ಟಿಯನ್ನು ಎಪ್ರೀಲ್ 2010 ಕ್ಕೆ ಸಿದ್ಧಪಡಿಸಬೇಕೇ? ಜನವರಿ 2011 ಕ್ಕೆ ಸಿದ್ಧಪಡಿಸಬೇಕೇ? ಫೆಬ್ರವರಿ 2011 ಕ್ಕೆ ಸಿದ್ಧಪಡಿಸಬೇಕೇ?**

ಸೌಹಾರ್ದ ಸಹಕಾರಿ ನಿಯಮಗಳು 2004, ನಿಯಮ 5(3)ರನ್ವಯ ಮುಖ್ಯಕಾರ್ಯನಿರ್ವಾಹಕನು ಚುನಾವಣೆಗೆ ಮೂವತ್ತು ದಿನಗಳ ಮುಂಚೆ ತಾತ್ಕಾಲಿಕ ಮತದಾರರ ಪಟ್ಟಿಯನ್ನು ತಯಾರಿಸತಕ್ಕದ್ದು. ನಿಯಮ 5(4)ರನ್ವಯ ಚುನಾವಣೆಗೆ 15 ದಿನಗಳ ಮುಂಚೆ ಸುಸ್ತಿದಾರರ ಮತ್ತು ಅರ್ಹ ಮತದಾರರ ಪಟ್ಟಿಯನ್ನು ತಯಾರಿಸತಕ್ಕದ್ದು.

ತುಂಗಾ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ರಾಯಚೂರು.

**ಪ್ರಶ್ನೆ : ಸೌಹಾರ್ದ ಸಹಕಾರಿಯ ಅಡಿಯಲ್ಲಿ ಶಿಕ್ಷಣಕ್ಕೆ ಸಂಬಂದಪಟ್ಟ ಚಟುವಟಿಕೆಗಳನ್ನು ನಡೆಸಬಹುದೆ?**

ಸಹಕಾರಿಯ ಸದಸ್ಯರ / ಸದಸ್ಯರ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪನೆಗೆ ಅವಕಾಶವಿರುತ್ತದೆ.

**ಪ್ರಶ್ನೆ : ಆಂತರಿಕ ಲೆಕ್ಕ ಪರಿಶೋಧನೆ ಮಾಡಲು ಪ್ರತ್ಯೇಕ ನಿಯಮಾವಳಿಗಳೇನಾದರೂ ಇವೆಯೆ? ಸಹಕಾರಿಯ ನಿರ್ದೇಶಕರ ಆಂತರಿಕ ಲೆಕ್ಕ ಪರಿಶೋಧನೆ ಮಾಡಬಹುದೆ?**

ಕಾಯ್ದೆಯಲ್ಲಿ ಆಂತರಿಕ ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಯಾವುದೇ ಪ್ರತ್ಯೇಕ ನಿಯಮಗಳಿಲ್ಲ, ಆ ಕುರಿತು ಸಹಕಾರಿಯು ನಿಯಮ ರೂಪಿಸಿಕೊಳ್ಳಬೇಕಾಗುತ್ತದೆ. ಸಹಕಾರಿಯ ನಿರ್ದೇಶಕರು ಆಂತರಿಕ ಲೆಕ್ಕ ಪರಿಶೋಧನೆ ಮಾಡುವುದು ನೈತಿಕವಾಗಿ ಸರಿಯಾದುದ್ದಲ್ಲ (ತನ್ನ ಪ್ರಕರಣಗಳಿಗೆ ತಾನೇ ನ್ಯಾಯಾಧೀಶನಾದಂತಾಗುತ್ತದೆ)

ಆನಂದ ಚೌಗಲಾ ಅರಿಹಂತ ಸೌಹಾರ್ದ ಸಹಕಾರಿ ನಿ.ಹುಲ್ಲೋಳಿ.

**ಪ್ರಶ್ನೆ : ಕಂಪನಿ ಕಾಯ್ದೆಯಡಿಯಲ್ಲಿ ನೊಂದಣಿಯಾಗಿರುವ ಸಂಸ್ಥೆಯನ್ನು ಸಹಕಾರಿಯ ಸದಸ್ಯರನ್ನಾಗಿ ಮಾಡಿಕೊಳ್ಳಬಹುದೆ? ಆ ಕಂಪನಿಗೆ ಸಹಕಾರಿಯಿಂದ ಸಾಲನೀಡಬಹುದೆ.?**

ಕಲಂ 21 ಎ (ಬಿ) ರನ್ವಯ ಕಂಪನಿಯನ್ನು ನಾಮಮಾತ್ರ ಅಥವಾ ಸಹ ಸದಸ್ಯನನ್ನಾಗಿ ಮಾಡಿಕೊಳ್ಳಬಹುದು.

ಸ್ವಾತಿ ಸೌಹಾರ್ದ ಸಹಕಾರಿ ಹೊಸಪೇಟೆ.

**ಪ್ರಶ್ನೆ : ಸಹಕಾರಿಯಲ್ಲಿ ಸಾಲ ಪಡೆದುಕೊಂಡ ಸದಸ್ಯನಿಂದ (ಸಾಲಗಾರನಿಂದ) ಸಹಿ ಮಾಡಿದ ಖಾಲಿ ಚೆಕ್ಕ್ ಪಡೆಯಬಹುದೆ.? ಸಾಲಗಾರನು ಸಾಲ ತೀರಿಸದೆ ಇದ್ದಾಗ ಸದರಿ ಖಾಲಿ ಚೆಕ್ಕುಗಳನ್ನು ಉಪಯೋಗಿಸಿ ಬ್ಯಾಂಕಿನಿಂದ ಹಣಪಡೆದು ಸಾಲ ತಿರುವಳಿಗೆ ಕ್ರಮವಿಡಬಹುದೆ?**

ಖಾಲಿ ಚೆಕ್ ಪಡೆಯುವುದು ಕಾನೂನುಬಾಹಿರವಾದ ಕ್ರಮವಾಗಿರುತ್ತದೆ.

ಮಯೂರ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ಸಂಕೇಶ್ವರ.

**ಪ್ರಶ್ನೆ : ರಾಷ್ಟ್ರೀಕೃತ ಬ್ಯಾಂಕುಗಳಂತೆ ಸೌಹಾರ್ದ ಸಹಕಾರಿಗಳಲ್ಲಿ ಮಾಸಿಕ ತ್ರೈಮಾಸಿಕವಾಗಿ ಬಡ್ಡಿಯನ್ನು ಪರಿವರ್ತಿಸಿ ಚಕ್ರಬಡ್ಡಿಯನ್ನಾಗಿ ವಿಧಿಸಬಹುದೆ?**

ಸಾಲಗಾರನ ಜೊತೆ ಸಾಲವನ್ನು ನೀಡುವಾಗ ಮಾಡಿಕೊಂಡ ಒಪ್ಪಂದದನ್ವಯ ಬಡ್ಡಿಯನ್ನು ವಿಧಿಸಬೇಕಾಗುತ್ತದೆ. ಚಕ್ರಬಡ್ಡಿಯನ್ನು ವಿಧಿಸಲು ಸಾಧ್ಯವಿಲ್ಲ.

**ಪ್ರಶ್ನೆ : ಸಿಂಪಲ್ ಮಾರ್ಟಗೇಜನಿಂದ ಅತಿಹೆಚ್ಚು ಅಂದರೆ ಎಷ್ಟು ಸಾಲ ನೀಡಬಹುದು.**

ಸಹಕಾರಿಯ ಸಾಲದ ನಿಯಮಾವಳಿಗಳಲ್ಲಿ ಇರುವ ಅವಕಾಶಗಳಿಗೆ ಮಿತಿಗೆ ಒಳಪಟ್ಟು ಸಾಲ ನೀಡಬಹುದು.

**ಪ್ರಶ್ನೆ: ಸಹಕಾರಿಯ ನಿರ್ದೇಶಕರಿಗೆ ಮಾಸಿಕ ಸಭೆಯ ಸಿಟ್ಟಿಂಗ ಫೀ ಭತ್ಯ ಕೊಡಬೇಕೆ?**

ಸಾಮಾನ್ಯ ಸಭೆಯಲ್ಲಿ ಅನುಮೋಧನೆ ಪಡೆದಿದ್ದಲ್ಲಿ ಮಾತ್ರ ಮಾಸಿಕ ಸಭೆಯ ಸಿಟ್ಟಿಂಗ ಫೀ ಭತ್ಯೆ ಕೊಡಬಹುದು.

**ಪ್ರಶ್ನೆ: ಸಹಕಾರಿಯಲ್ಲಿ ಸಾಲಪಡೆದು ಸುಸ್ತಿದಾರರಾದ ಸದಸ್ಯರಿಗೆ ವ್ಯಯಕ್ತಿಕ ಜಾಮಿನು ನೀಡಿದ ಸದಸ್ಯರು ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಬಹುದೆ?**

ಕಲಂ 25(ಇ) ರನ್ವಯ ಇಂಥಹ ಸದಸ್ಯರು ಆಡಳಿತ ಮಂಡಳಿ ಚುನಾವಣೆಯಲ್ಲಿ ಸ್ಪರ್ಧಿಸಲು ಅರ್ಹರಾಗಿರುವದಿಲ್ಲ.

ಭೂಮಿಕಾ ಸೌಹಾರ್ದ ಪತ್ತಿನ ಸಹಕಾರಿ ನಿ.ಹಾವೇರಿ

ಸುಸ್ತಿಯಾದ ಸಾಲಕ್ಕೆ ಸಾಲಗಾರರು ಕೊಟ್ಟ ಚೆಕ್ಕುಗಳು ಬೌನ್ಸ ಆದಾಗ ಕೇಸನ್ನು ಹಾಕಬಹುದೆ? ಯಾವ ನ್ಯಾಯಾಲಯದಲ್ಲಿ ಕೇಸು ಹಾಕಬಹುದು.?

ನೆಗೋಶಿಯೇಬಲ್ ಇನ್ಸ್ಟ್ರುಮೆಂಟ್ ಕಾಯ್ದೆ ಅನ್ವಯ ಜೆಎಮ್ಎಫ್‌ಸಿ ನ್ಯಾಯಾಲಯದಲ್ಲಿ ಪ್ರಕರಣವನ್ನು ದಾಖಲಿಸಬಹುದು.

**ಪ್ರಶ್ನೆ: ಅರ್ಹ ಮತದಾರರೆಂದರೆ ಯಾರು? ಖಿಟ್ಟಾಕಿ (ಅವಧಿಮೀರಿದ ಸಾಲವಿರುವ) ಸಾಲಗಾರನಿಗೆ ಜಾಮೀನದಾರರಾಗಿರುವ ಸದಸ್ಯರಿಗೆ ಮತದಾನದ ಹಕ್ಕು ಇದೆಯೆ?**

ಅರ್ಹ ಮತದಾರರೆಂದರೆ ಸೌಹಾರ್ದ ಸಹಕಾರಿ ಅಧಿನಿಯಮ 1997 ಮತ್ತು ಉಪವಿಧಿಯಲ್ಲಿ ಹೇಳಲಾಗಿರುವ ಯಾವುದೇ ಅನರ್ಹತೆಯನ್ನು ಹೊಂದಿರದೆ, ಉಪವಿಧಿಯಲ್ಲಿ ತಿಳಿಸಲಾಗಿರುವ ಕನಿಷ್ಠ ವ್ಯವಹಾರವನ್ನು ಮಾಡಿರುವ ಮತ್ತು ಸಹಕಾರಿಗೆ ಯಾವುದೇ ಕಟಬಾಕಿಯಾಗಿರದ ಮತ್ತು ಸತತ ಮೂರು ಕಂತುಗಳನ್ನು ಮರುಪಾವತಿಸಲು ವಿಫಲವಾಗಿರುವ ಸದಸ್ಯನಿಗೆ ಜಾಮೀನುದಾರನಾಗಿರುವ ಸದಸ್ಯನಾಗಿರಬೇಕು. ಸಾಲಗಾರನಿಗೆ ಜಾಮೀನುದಾರರಾಗಿರುವ ಸದಸ್ಯರಿಗೆ ಮತದಾನದ ಹಕ್ಕು ಇರುತ್ತದೆ.

ನವಚೈತನ್ಯ ವಿವಿಧೋದ್ದೇಶ ಸೌಹಾರ್ದ ಸಹಕಾರಿ ನಿ., ಚೆಂದಗಡ.

**ಪ್ರಶ್ನೆ: ಸರಕಾರಿ ನೌಕರರು ಸೌಹಾರ್ದ ಸಹಕಾರಿಗಳಲ್ಲಿ ನಿರ್ದೇಶಕರಾಗಿರಬಹುದೆ? ಅಧ್ಯಕ್ಷರಾಗಬಹುದೆ?**

ಸರಕಾರಿ ನೌಕರರು ತಮ್ಮ ಕರ್ನಾಟಕ ನಾಗರೀಕ ಸಿವಿಲ್ ಸೇವಾನಿಯಮಗಳು(ನಡತೆ) ರನ್ವಯ ತಮ್ಮ ನಿಯಂತ್ರಣಾಧಿಕಾರಿ / ನೇಮಕಾಧಿಕಾರಿಗಳಿಂದ ಪೂರ್ವಾನುಮತಿ ಪಡೆಯದೇ ಸೌಹಾರ್ದ ಸಹಕಾರಿಗಳಲ್ಲಿ ನಿರ್ದೇಶಕರಾಗುವಂತಿಲ್ಲ / ಅಧ್ಯಕ್ಷರಾಗುವಂತಿಲ್ಲ.

**ಪ್ರಶ್ನೆ: ಒಂದು ಸಹಕಾರಿಯ ಮುಖ್ಯಕಾರ್ಯನಿರ್ವಹಣಾಧಿಕಾರಿಯು ಅದೇ ಸಹಕಾರಿಯ ಸದಸ್ಯನಾಗಿರಬಹುದೆ?**

ಸಹಕಾರಿಯ ಆಡಳಿತ ಮಂಡಳಿಯ ಮುಖ್ಯ ನಿರ್ವಹಣಾಧಿಕಾರಿಯನ್ನು



ಸದಸ್ಯತ್ವ ಪ್ರವೇಶಕ್ಕೆ ಅನುಮತಿ ನೀಡಿದಲ್ಲಿ ಸಹಕಾರಿಯ ಸದಸ್ಯನಾಗಬಹುದು. ಅಂಥ ಸದಸ್ಯತ್ವ ಪ್ರವೇಶವು ಸಾಮಾನ್ಯ ಸಭೆಯ ಪೂರ್ವ ಘಟನೋತ್ತರದ ಅನುಮತಿಗೆ ಒಳಪಡುವುದು ಕಡ್ಡಾಯ.

ಬಾಲಚಂದ್ರ ಶ್ರೀ ವಾಸವಿ ವಿವಿಧೋದ್ದೇಶಗಳ ಸೌಹಾರ್ದ ಸಹಕಾರಿ ಕೊಳ್ಳೆಗಾಲ

**ಪ್ರಶ್ನೆ: ನಮ್ಮ ಸಹಕಾರಿಯು ಪ್ರಾರಂಭವಾಗಿ 2 ವರ್ಷಗಳಾಗಿವೆ. ಹೆಚ್ಚಿನ ಸದಸ್ಯರು ವ್ಯವಹಾರ ಪ್ರಾರಂಭಿಸಿಲ್ಲ, ಸಾಮಾನ್ಯ ಸಭೆಗಳಲ್ಲಿ ಭಾಗವಹಿಸಿಲ್ಲ. ನಾವು ಹೇಗೆ ಕ್ರಮವಿಡಬೇಕು?**

ಕಾಯ್ದೆ ಕಲಂ 20(2) ಪ್ರಕಾರ ಅಂಥಹ ಸದಸ್ಯರು ಸಹಕಾರಿಯ ಸದಸ್ಯರಿಗೆ ಮುಂದುವರೆಯಲು ಅನರ್ಹರಾಗಿರುತ್ತಾನೆ. ಆದ್ದರಿಂದ ಅಂಥಹ ಸದಸ್ಯರನ್ನು ಕಾಯ್ದೆ ಕಲಂ 21 ಕಾಯ್ದೆ ಕಲಂ 20 (3)ರಲ್ಲಿ ವಿವರಿಸಿರುವಂತೆ ಸೂಕ್ತ ಅವಕಾಶವನ್ನು ಹೇಳಿಕೊಳ್ಳಲು ಅವಕಾಶಕೊಟ್ಟು ಸದಸ್ಯತ್ವದಿಂದ ತೆಗೆದುಹಾಕಬಹುದು.

ಈಶ ಪ್ರಭು ಕ್ರೆಡಿಟ್ ಸೌಹಾರ್ದ ಸಹಕಾರಿ ನಿ ಅರವಟ್ಟಿ

**ಪ್ರಶ್ನೆ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ನಂ 128ರಡಿಯಲ್ಲಿ ಸಂಧಿಗ್ಧ ಪರಿಸ್ಥಿತಿಯಲ್ಲಿ ಇಲಾಖೆಯ ನೆರವು ಪಡೆಯಲು ಅವಕಾಶವಿರುತ್ತದೆ. ಆದರೆ ತಿದ್ದುಪಡಿ ಮೂಲಕ ಸೌಹಾರ್ದ ಸಹಕಾರಿ ಕಾಯ್ದೆಯಡಿಯಲ್ಲಿ ಅಳವಡಿಸಲು ಅವಕಾಶವಿದೆಯೆ?**

ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ನಂ 128ರಡಿಯಲ್ಲಿ ಸಂಧಿಗ್ಧ ಪರಿಸ್ಥಿತಿಯಲ್ಲಿ ಇಲಾಖೆಯ ನೆರವು ಪಡೆಯಲು ಅವಕಾಶವಿರುವದಿಲ್ಲ. ಸದರ ಕಾಯ್ದೆಯ ಕಲಂ 132 ರನ್ವಯ ತೊಡಕುಗಳನ್ನು ನಿವಾರಿಸುವ ಅಧಿಕಾರ ರಾಜ್ಯ ಸರಕಾರಕ್ಕೆ ಇರುತ್ತದೆ.ಇದೇ ರೀತಿಯ ಅಧಿಕಾರ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997 ರ ಕಲಂ 70 ರಲ್ಲಿ ಇರುತ್ತದೆ.ಆದರೆ ನೆರವು ಪಡೆಯಲು ಅವಕಾಶವಿರುವದಿಲ್ಲ.

ವಿದ್ಯಾಸಾಗರ ಚೌಗಲೆ ಶ್ರೀ ಲಾಲಬಹಾದ್ದೂರ ಕ್ರೆಡಿಟ್ ಸಹಕಾರಿ ನಿ ತಿರಗುಪ್ಪ.

**ಪ್ರಶ್ನೆ: ಸಹಕಾರಿಯಲ್ಲಿ ಬಡ್ಡಿಯೇತರ ಆದಾಯ ಹೆಚ್ಚಿಸುವ ವ್ಯವಹಾರಗಳಾದ ಟೆಲಿಫೋನ್ ಬಿಲ್ ಪಾವತಿಸುವುದು, ಚೀಟಿ, ಇನ್ಶೂರೆನ್ಸ, ಪಾಸಪೋರ್ಟ, ಟಿಕೆಟ್ ಬುಕ್ಕಿಂಗ ಕೆ.ಇ.ಬಿ. ಬಿಲ್ಲುಪಾವತಿಸುವುದು ಮನಿ ಟ್ರಾನ್ಸಫರ್ ಇತ್ಯಾದಿ ವ್ಯವಹಾರ ಮಾಡಲು ಬೈಲಾ ತಿದ್ದುಪಡಿ ಅವಶ್ಯಕವೆ?**

ಹೌದು ಉಪವಿದಿಗಳ ತಿದ್ದುಪಡಿ ಅವಶ್ಯಕವಾಗಿದೆ.

**ಪ್ರಶ್ನೆ : ಸರಕಾರದಿಂದ ಯಾವುದಾದರೂ ಸಹಾಯಧನ ಪಡೆಯುವ ಅವಕಾಶವಿದೆಯೆ?**

ಕಾಯ್ದೆ ಕಲಂ 19ರ ಪ್ರಕಾರ ಸರ್ಕಾರದ ಯಾವುದೇ ಸಹಾಯಧನ ಪಡೆಯುವಂತಿಲ್ಲ.

ಮಾತೋಶ್ರೀ ಸೌಹಾರ್ದ ಪತ್ತಿನ ಸಹಕಾರಿ ನಿ ಗುಲ್ಬರ್ಗಾ.

**ಪ್ರಶ್ನೆ : ಸಾಲಗಾರನೊಡನೆ ಸಾಲದ ಮೊತ್ತ,ಬಡ್ಡಿ ಮತ್ತುಸುಸ್ತಿಬಡ್ಡಿಯನ್ನು ಯಾವ ಅಂಶದ ಮೇಲೆ ನಿಗದಿಪಡಿಸಬೇಕು.**

ನಿಮ್ಮ ಸಹಕಾರಿಯಲ್ಲಿ ಅಳವಡಿಸಿಕೊಂಡಿರುವ ಸಾಲದ ನಿಯಮಾವಳಿಗಳ ಅವಕಾಶಗಳಿಗೆ ಒಳಪಟ್ಟು, ಸಾಲದ ಮೊತ್ತ,ಬಡ್ಡಿ ಮತ್ತುಸುಸ್ತಿ ಬಡ್ಡಿಯನ್ನು ನಿಗದಿಪಡಿಸಬೇಕು.

ಮುಂದಿನ ಸಂಚಿಕೆಗೆ...

# ಸೌಹಾರ್ದ ಸಹಕಾರಿ ಕಾಯ್ದೆ ಆಶಯ ಭಾಗ 2



ಶ್ರೀ ವೈ. ಕುಮಾರ
ಉಪಪ್ರಧಾನ ವ್ಯವಸ್ಥಾಪಕರು

## ಉದ್ದೇಶ ಮತ್ತು ಕಾರಣಗಳ ಹೇಳಿಕೆ

3. ಪೂರಕ ಸಂಸ್ಥೆಗಳಿಗೆ, ಸಹಕಾರಿಗಳ ನಡುವೆ ಪಾಲುದಾರಿಕೆಗೆ ಮತ್ತು ಸಹಕಾರಿಗಳು ಹಾಗೂ ಇತರೆ ಸಂಸ್ಥೆಗಳ ನಡುವೆ ಸಹೋದ್ಯಮಕ್ಕೆ ಉತ್ತೇಜನ ನೀಡುವುದು;

* ಭಾಗ – 1 ರ ಅಂಶ (1) ರಲ್ಲಿ ತಿಳಿಸಿರುವಂತೆ ಈ ಕಾಯ್ದೆಯಡಿ ನೊಂದಣಿಗೊಂಡ ಸಹಕಾರಿಗಳು ಸ್ಪರ್ಧೆಯನ್ನು ಎದುರಿಸುವ ಶಕ್ತಿ ಪಡೆಯುವ ಸಲುವಾಗಿ, ಸ್ವಾವಲಂಬಿ ಸಹಕಾರಿಗಳಾಗುವ ಸಲುವಾಗಿ, ಉದ್ಯಮದಂತೆ ಸಹಕಾರಿಗಳು ಪ್ರಗತಿಯನ್ನು ಹೊಂದುವ ಸಲುವಾಗಿ, ಈ ಮೇಲ್ಕಂಡ ಅಂಶ (3)ರರಲ್ಲಿನ ಆಶಯದ ಈಡೇರಿಕೆಗಾಗಿ, ಸೌಹಾರ್ದ ಸಹಕಾರಿಗಳು ಪೂರಕ ಸಂಸ್ಥೆಗಳನ್ನು ಪ್ರಾರಂಬಿಸಲು ಕಾಯ್ದೆ ಕಲಂ 15 ರಲ್ಲಿ ಅವಕಾಶ ನೀಡಲಾಗಿದೆ. ಯಾವುದೇ ಸಹಕಾರಿಯು, ಅದರ ಸಾಮಾನ್ಯ ಸಭೆಯಲ್ಲಿ ಅನುಮತಿ ಪಡೆದು, ಒಂದು ಅಥವಾ ಒಂದಕ್ಕಿಂತ ಹೆಚ್ಚು ಪೂರಕ ಸಂಸ್ಥೆಗಳನ್ನು ಪ್ರಾರಂಭಿಸಬಹುದಾಗಿದೆ. ಪ್ರಾರಂಭಿಸುವ ಪೂರಕ ಸಂಸ್ಥೆಗಳನ್ನು ಸಂಬಂಧಿಸಿದ ಕಾನೂನಿನಡಿಯಲ್ಲಿ ನೊಂದಾಯಿಸಲು ಅವಕಾಶ ನೀಡಲಾಗಿದೆ. (ಪರಂತು ಬ್ಯಾಂಕಿನ ಸಂದರ್ಭದಲ್ಲಿ ಆರ್.ಬಿ.ಐ.ನ ಪೂರ್ವಾನುಮತಿ ಅಗತ್ಯ) (ಕಲಂ 15ನ್ನು ನೋಡಬಹುದಾಗಿದೆ)

* ಯಾವುದೇ ಎರಡು ಅಥವಾ ಹೆಚ್ಚು ಸಹಕಾರಿಗಳು ತನ್ನ ಸಾಮಾನ್ಯ ಸಭೆಯಲ್ಲಿ ಅನುಮತಿ ಪಡೆದು, ಯಾವುದೇ ಒಂದು ಅಥವಾ ಒಂದಕ್ಕಿಂತ ಹೆಚ್ಚು ನಿರ್ದಿಷ್ಟ ವ್ಯವಹಾರವನ್ನು ನಡೆಸುವುದಕ್ಕಾಗಿ, ಪಾಲುದಾರಿಕೆಯಲ್ಲಿ ಸೇರಿಕೊಳ್ಳಬಹುದು. ಇದಕ್ಕೆ ಸಂಬಂಧಿಸಿದಂತೆ ಕಾಯ್ದೆ ಕಲಂ 14 ರಲ್ಲಿ ಅವಕಾಶ ಮಾಡಿಕೊಡಲಾಗಿದೆ.

* ಯಾವುದೇ ಸಹಕಾರಿ ಅಥವಾ ಸಹಕಾರಿಗಳು ತಮ್ಮ ಉಪವಿಧಿಗಳಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಒಂದು ಅಥವಾ ಒಂದಕ್ಕಿಂತ ಹೆಚ್ಚು ವ್ಯವಹಾರಗಳನ್ನು ನಡೆಸುವುದಕ್ಕಾಗಿ ಸಹೋದ್ಯಮದಲ್ಲಿ ತೊಡಗಬಹುದಾಗಿದೆ. ಸೌಹಾರ್ದ ಸಹಕಾರಿಗಳು ಸಹೋದ್ಯಮದಲ್ಲಿ ತೊಡಗಲು ಅನುಕೂಲವಾಗುವಂತೆ ಕಾಯ್ದೆ ಕಲಂ 16 ರಲ್ಲಿ ವಿವರಿಸಲಾಗಿದೆ.

ಉದ್ದೇಶ ಮತ್ತು ಕಾರಣಗಳ ಹೇಳಿಕೆಯಲ್ಲಿನ ಅಂಶ (3)ರ ಆಶಯಗಳ ಈಡೇರಿಕೆಗಾಗಿ, ಕಾಯ್ದೆ ಕಲಂ, 14, 15, 16 ರನ್ನು ಸೇರ್ಪಡೆ ಮಾಡಲಾಗಿದೆ.

4. ಮೇಲೆ ಹೇಳಿದ ಉದ್ದೇಶಗಳ ಮುಂದುವರಿಕೆಯಲ್ಲಿ ಸಹಕಾರಿಗಳು, ಒಕ್ಕೂಟ ಸಹಕಾರಿಗಳು ಮತ್ತು ಸಂಯುಕ್ತ ಸಹಕಾರಿಯನ್ನು ನೊಂದಣಿ ಮಾಡುವುದು.

* ಮೇಲ್ಕಂಡ ಉದ್ದೇಶಗಳನ್ನು ಯಶಸ್ವಿಯಾಗಿ ನಿರ್ವಹಿಸಬೇಕಾದರೆ ಅಗತ್ಯವಾಗಿ ರಚನೆಯಾಗಬೇಕಾದಂತವುಗಳು, ಪ್ರಾಥಮಿಕ ಸಹಕಾರಿಗಳು ಹಾಗೂ ಒಕ್ಕೂಟ ಸಹಕಾರಿಗಳು.

* ಪ್ರಾಥಮಿಕ ಸಹಕಾರಿಗಳು ಹಾಗೂ ಒಕ್ಕೂಟ ಸಹಕಾರಿಗಳ ಆರೋಗ್ಯ ಪೂರ್ಣ ಬೆಳವಣಿಗೆಗಾಗಿ ಸಂಯುಕ್ತ ಸಹಕಾರಿಯು ಅಗತ್ಯವಿದೆ. ಈ ಹಿನ್ನೆಲೆಯಲ್ಲಿ ಸಹಕಾರಿಗಳ, ಒಕ್ಕೂಟ ಸಹಕಾರಿಗಳ ಹಾಗೂ ಸಂಯುಕ್ತ ಸಹಕಾರಿಯ ನೊಂದಣಿಯು ಕಾಯ್ದೆಯ ಆಶಯವಾಗಿದೆ.

5. 1959ರ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದಡಿಯಲ್ಲಿ ನೊಂದಾಯಿಸಲಾದ ಸಹಕಾರ ಸಂಘಗಳನ್ನು ಪ್ರಾಸ್ತವಿತ ಶಾಸನದ ಅಡಿ ಸಹಕಾರಿಯಾಗಿ ಪರಿವರ್ತಿಸುವುದು.

* ಈಗಾಗಲೇ ಹಳೇ ಕಾಯ್ದೆಯಡಿ ನೊಂದಾಯಿಸಲಾದ ಸಹಕಾರ ಸಂಘಗಳನ್ನು ಸೌಹಾರ್ದ ಸಹಕಾರಿ ಕಾಯ್ದೆಯಡಿ ಪರಿವರ್ತಿಸುವುದು ಈ ಅಂಶದ ಬಹುಮುಖ್ಯ ಆಶಯವಾಗಿದೆ.

ಮೇಲೆ ಚರ್ಚಿಸಿದ ಎಲ್ಲಾ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ, ಸಹಕಾರ ಕ್ಷೇತ್ರವನ್ನು ಹೆಚ್ಚೆಚ್ಚು ಬಲಿಷ್ಠಗೊಳಿಸಿ, ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸಹಕಾರ ಕ್ಷೇತ್ರವು ತನ್ನದೇ ಆದಂತಹ ಛಾಪು ಮೂಡಿಸಲು, ಅಲ್ಲದೆ ಮಹಾತ್ಮ ಗಾಂಧೀಜೀರವರ ಕನಸಾದ "ಪ್ರತಿ ಹಳ್ಳಿಗೊಂದು ಸಹಕಾರ ಸಂಘ" ಎಂಬ ಆಶಯದ ಈಡೇರಿಕೆಗೆ, "ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಕಾರವೇ ಹೆಬ್ಬಾಗಿಲು" ಎಂಬ ಬಾಪೂರವರ ಚಿಂತನೆಯಂತೆ, ಸಹಕಾರ ಕ್ಷೇತ್ರದ ಅಭಿವೃದ್ಧಿಗಾಗಿ ಕರ್ನಾಟಕ ಸೌಹಾರ್ದ ಸಹಕಾರಿ ಅಧಿನಿಯಮ 1997ನ್ನು ಜಾರಿಗೆ ತರಲಾಗಿದೆ.

# ಸೌಹಾರ್ದ ಸಹಕಾರಿಗಳ
# ಶಾಸನಬದ್ಧ ಲೆಕ್ಕಪರಿಶೋಧನೆ



ಎಸ್. ಜಿ. ಟೋಪಣ್ಣವರ
ವಿಭಾಗೀಯ ಅಧಿಕಾರಿ, ಬೆಳಗಾವಿ.

"ಲೆಕ್ಕಪರಿಶೋಧನೆ ಮಾಡಿಸುವುದು ಕೇವಲ ನಿರ್ದೇಶಕ ಮಂಡಳಿ ತನ್ನ ಅಸ್ತಿತ್ವ ಉಳಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಬಾರದು"

ಎಲ್ಲ ಸೌಹಾರ್ದ ಸಹಕಾರಿ ಸಂಸ್ಥೆಗಳು ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ ಕಲಂ 33 (1) ರ ಪ್ರಕಾರ ಪ್ರತಿವರ್ಷ ಸಹಕಾರಿ ವರ್ಷ ಮುಕ್ತಾಯವಾದ ನಂತರ ಮುಕ್ತಾಯಗೊಂಡ ವರ್ಷದಲ್ಲಿ ಸಹಕಾರಿಯು ಕೈಕೊಂಡ ವ್ಯವಹಾರಗಳಿಗೆ ಶಾಸನಬದ್ಧ ಲೆಕ್ಕಪರಿಶೋಧನೆಯನ್ನು ಕಡ್ಡಾಯವಾಗಿ ಮಾಡಿಸಿಕೊಳ್ಳಬೇಕಾಗುತ್ತದೆ. ಲೆಕ್ಕಪರಿಶೋಧನೆ ಮುಗಿದ ನಂತರ ಜರುಗುವ ಸಾಮಾನ್ಯ ಸಭೆಯಲ್ಲಿ ಸದರಿ ವರ್ಷದ ಲೆಕ್ಕಪರಿಶೋಧನಾ ವರದಿಯನ್ನು ಮಂಡಿಸಬೇಕಾಗುತ್ತದೆ.

ಕಾನೂನು ಪ್ರಕಾರ ಸಹಕಾರಿಯ ಆಡಳಿತ ಮಂಡಳಿಯು ತನ್ನ 5 ವರ್ಷದ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾದರೆ ವೇಳೆಗೆ ಸರಿಯಾಗಿ ಲೆಕ್ಕಪರಿಶೋಧನೆ ಮಾಡಿಸಬೇಕು ಹಾಗೂ ಲೆಕ್ಕಪರಿಶೋಧನೆಯನ್ನು ವಾರ್ಷಿಕ ಸಾಮಾನ್ಯ ಸಭೆಯಲ್ಲಿ ಹಾಜರುಪಡಿಸಬೇಕು. ಪ್ರತಿ ವರ್ಷ ಸಹಕಾರಿ ವರ್ಷ ಮುಕ್ತಾಯಗೊಂಡ 6 ತಿಂಗಳಿನಲ್ಲಿ ವಾರ್ಷಿಕ ಸರ್ವ ಸಾಧಾರಣ ಸಭೆಯನ್ನು ಜರುಗಿಸಬೇಕು. ಆಡಳಿತ ಮಂಡಳಿತ ಅಧಿಕಾರಾವಧಿ ಮುಗಿದ ನಂತರ ವೇಳೆಗೆ ಸರಿಯಾಗಿ ನಿರ್ದೇಶಕ ಮಂಡಳಿಯ ಚುನಾವಣೆ ನಡೆಸುವ ವ್ಯವಸ್ಥೆ ಮಾಡಬೇಕು. ಸಹಕಾರಿಯ ಆಡಳಿತ ಮಂಡಳಿಯು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಈ ಎಲ್ಲ ಕಾರ್ಯಗಳನ್ನು ಸರಿಯಾಗಿ ವ್ಯವಸ್ಥಿತವಾಗಿ ಸರ್ವಸಾಮಾನ್ಯವಾಗಿ ಮಾಡುತ್ತದೆ.

ಲೆಕ್ಕಪರಿಶೋಧನೆ ಮಾಡಿಸುವುದು ಕೇವಲ ನಿರ್ದೇಶಕ ಮಂಡಳಿ ತನ್ನ ಅಸ್ತಿತ್ವ ಉಳಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಬಾರದು. ಲೆಕ್ಕಪರಿಶೋಧನೆ ಎಂದರೆ ಸಂಸ್ಥೆಯ ಜೀವನಾಡಿ ಇದ್ದ ಹಾಗೇ ಮನುಷ್ಯನು ತನ್ನ ದೈಹಿಕ ಆರೋಗ್ಯವನ್ನು ಸರಿಯಾಗಿ ಹಾಗೂ ಸದೃಢವಾಗಿ ಉಳಿಸಿಕೊಳ್ಳಲು ತಜ್ಞ ಹಾಗೂ ಉತ್ತಮ ವ್ಯವಸ್ಥೆ ಹಾಗೂ ಉಪಕರಣವುಳ್ಳ ವೈದ್ಯಕೀಯ ಸಂಸ್ಥೆಗೆ/ಆಸ್ಪತ್ರೆಗೆ ಹೋಗಿ ವೈದ್ಯಕೀಯ ತಪಾಸಣೆ (Medical Checkup)ಯನ್ನು ಮೇಲಿಂದ ಮೇಲೆ 1–2 ವರ್ಷ ಕಾಲದೊಳಗೊಮ್ಮೆ ಹೇಗೆ ಮಾಡಿಸಿಕೊಂಡು ಔಷಧೋಪಚಾರ ಪಡೆದುಕೊಂಡು ಉತ್ತಮ ಹಾಗೂ ಸದೃಢ ದೈಹಿಕ ಆರೋಗ್ಯ ಇಟ್ಟುಕೊಳ್ಳುವನೊ ಹಾಗೇ ಸಹಕಾರಿಯು ಸಂಸ್ಥೆಯ ಉತ್ತಮ ಆರ್ಥಿಕ ಆರೋಗ್ಯ (Good Financial Health), ಉತ್ತಮ ಆಡಳಿತ/ಮೇಲ್ವಿಚಾರಣೆ ಆರೋಗ್ಯ (Good Administrative and supervision health), ಹೊಂದಲು ಉತ್ತಮ.

ದೊಡ್ಡ ಮತ್ತು ಪ್ರಸಿದ್ಧ ಆರ್ಥಿಕ ಸಂಸ್ಥೆಗಳಲ್ಲಿ ಲೆಕ್ಕಪರಿಶೋಧನೆ ಮಾಡಿ ಅನುಭವ ಪಡೆದ ಹಾಗೂ ಚಾತುರ್ಯತೆಯುಳ್ಳ ವೃತ್ತಿಪರ ಪರಿಣಿತ, ಲೆಕ್ಕಪತ್ರ, ಆಡಳಿತ, ಶಿಕ್ಷಣ ಹಾಗೂ ತರಬೇತಿಗಳಲ್ಲಿ ಅನುಭವ ಪಡೆದ ಸಂಯುಕ್ತ ಸಹಕಾರಿಯು ಪ್ರಕಟಿಸಿದ ಲೆಕ್ಕಪರಿಶೋಧಕರ ಪಟ್ಟಿಯಲ್ಲಿ ಹೆಸರುಳ್ಳ (ಹೆಚ್ಚಿಗೆ ಫೀ ಕೊಡುವುದಾದರೂ ಪರವಾಗಿಲ್ಲ) ಅಂತಹ ಲೆಕ್ಕಪರಿಶೋಧಕನನ್ನು ಸಹಕಾರಿಗಳು ತಮ್ಮ ಸಂಸ್ಥೆಯ ಲೆಕ್ಕಪರಿಶೋಧಕನನ್ನಾಗಿ ನೇಮಿಸಿಕೊಂಡು ಲೆಕ್ಕಪರಿಶೋಧನೆ ಮಾಡಿಸಿದರೆ ಅಥವಾ ತಮ್ಮ ಸಹಕಾರಿಯಲ್ಲಿ ಈಗಾಗಲೇ ಲೆಕ್ಕಪರಿಶೋಧನೆ ಮಾಡುತ್ತಿರುವ ಪ್ರತಿಭಾವಂತ ಲೆಕ್ಕಪರಿಶೋಧಕರಿಗೆ ಹೆಚ್ಚಿನ ಫೀ ಕೊಡುವ ವ್ಯವಸ್ಥೆ ಮಾಡಿಕೊಂಡು ಅವರಿಂದ ಸಂಸ್ಥೆಯ ಬೆಳವಣಿಗೆಯ ದೃಷ್ಟಿಯಿಂದ ಅವಶ್ಯವಿದ್ದ ಮಾರ್ಗದರ್ಶನಗಳನ್ನು ಪಡೆಯುವುದಲ್ಲದೇ ಸಂಸ್ಥೆಯಲ್ಲಿದ್ದ ಎಲ್ಲ ತರಹದ ಆರ್ಥಿಕ, ಆಡಳಿತಾತ್ಮಕ, ಮೇಲ್ವಿಚಾರಣೆ, ಕಾರ್ಯಪದ್ಧತಿಯಲ್ಲಿಯ, ಗ್ರಾಹಕ ಸೇವೆಯಲ್ಲಿಯ ಕಲ್ಮಶಗಳನ್ನು ಹೊರತೆಗೆದು ಕೊಳೆದು ಹಾಕಿ ಸಂಸ್ಥೆಯ ಆಡಳಿತವನ್ನು, ಕಾರ್ಯಪದ್ಧತಿಯನ್ನು, ಗ್ರಾಹಕರ ಸೇವೆಯನ್ನು ಪ್ರಫುಲ್ಲಿತಗೊಳಿಸಲು

## ಲೆಕ್ಕಪರಿಶೋಧನೆ ಉದ್ದೇಶಗಳು



**ಲೆಕ್ಕಪರಿಶೋಧನೆಯು ಸಂಸ್ಥೆಯ ದೈನಂದಿನ ಜೀವನದಲ್ಲಿ ಮಹತ್ವದ ಪಾತ್ರ ವಹಿಸಿರುತ್ತದೆ. ಅದು ಸಹಕಾರಿಯ ಜೀವನಾಡಿಯಾಗಿರುತ್ತದೆ. ಪ್ರಜ್ಞಾವಂತ ಆಡಳಿತ ಮಂಡಳಿಯು ಅದರ ಮಹತ್ವವನ್ನು ಚೆನ್ನಾಗಿ ಬಲ್ಲರು.**

1) ಸಹಕಾರಿಯ ಒಟ್ಟು ಸ್ವಂತ ಬಂಡವಾಳ, ದುಡಿಯುವ ಬಂಡವಾಳ ಇವುಗಳ ಸಾಮಾನ್ಯ ಮಾಹಿತಿ.
2) ಸಹಕಾರಿಯು ಹೊಂದಿದ ಒಟ್ಟು ಠೇವುಗಳು ಅದರಲ್ಲಿಯ ಬೇರೆ ಬೇರೆ ಪ್ರಕಾರದ ಠೇವುಗಳ ರಕ್ಕಮುಗಳ ವಿವರ.
3) ಸಹಕಾರಿಯು ಪಡೆದ ಹೊರಗಿನ ಸಾಲ ಮತ್ತು ಜವಾಬ್ದಾರಿಗಳು.
4) ಸಹಕಾರಿಯು ಸಾಲದ ರೂಪದಲ್ಲಿ ತೊಡಗಿಸಿದ ಒಟ್ಟು ಹಣ ಹಾಗೂ ಮಂಜೂರು ಮಾಡಿದ ಬೇರೆ ಬೇರೆ ತರಹದ ಸಾಲಗಳು, ಅವುಗಳ ರಕ್ಕಮುಗಳು, ಸಾಲ ವಸೂಲಿಗಳು, ಸುಸ್ತಿ ಸಾಲಗಳ ವಿವರ ಹಾಗೂ ಸಾಲಕ್ಕೆ ಸುಸ್ತಿ ಸಾಲಗಳ ಪ್ರತಿಶತ.
5) ಸುಸ್ತಿ ಸಾಲ ವಸೂಲಿಗೆ ಕೈಕೊಂಡ ಕ್ರಮಗಳು ಹಾಗೂ ಅವುಗಳ ಪ್ರಗತಿ.
6) ನಿರ್ದೇಶಕರು ಹಾಗೂ ಅವರ ಸಂಬಂಧಿಕರು ಪಡೆದ ಸಾಲಗಳು ಹಾಗೂ ಅವುಗಳ ಸುಸ್ತಿ ಬಾಕಿಗಳು, ಕೈಕೊಂಡ ವಸೂಲಿಯ ಕ್ರಮಗಳು.
7) ಇತರ ಹೂಡಿಕೆಗಳು ಹಾಗೂ ಅವುಗಳ ವಿವರ ಹಾಗೂ ಅವುಗಳಿಂದ ಬಂದ ಆದಾಯ.
8) ಸಂಸ್ಥೆಯ ಇತರ ಜವಾಬ್ದಾರಿಗಳು ಹಾಗೂ ಆಸ್ತಿಗಳು.
9) ಸರ್ವ ಸಾಮಾನ್ಯವಾಗಿ ಕೊಡತಕ್ಕ ಬಾಕಿಗಳು ಹಾಗೂ ಬರತಕ್ಕ ರಕ್ಕಮುಗಳು ಹಾಗೂ ಅವುಗಳ ವಿವರ.

ಸಾಧ್ಯವಾಗುತ್ತದೆ. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಇದು ಅತಿ ಅವಶ್ಯಕವಾಗಿರುತ್ತದೆ.

ಈ ಮೇಲಿನ ಹಾಗೂ ಇನ್ನೂ ಹಲವಾರು ಅಂಶಗಳ ಮೇಲೆ ಲೆಕ್ಕಪರಿಶೋಧಕರು ತಮ್ಮ ವರದಿಯಲ್ಲಿ ವಿಶ್ಲೇಷಣೆ ಮಾಡಿ ಟಿಪ್ಪಣಿ ಕೊಟ್ಟಿರುತ್ತಾರೆ. ಸಂಸ್ಥೆಯ ಬೆಳವಣಿಗೆ ರಭಸದಿಂದ ಆಗುತ್ತಿದ್ದಲ್ಲಿ/ಬೆಳವಣಿಗೆ ಕುಂಠಿತಗೊಂಡಿದ್ದಲ್ಲಿ ಅದಕ್ಕೆ ಕಾರಣಗಳೇನೂ? ಸಂಸ್ಥೆಯು ಹೆಚ್ಚಿಗೆ ಲಾಭ ಮಾಡಿದ್ದರೆ/ನಷ್ಟ ಅನುಭವಿಸುತ್ತಿದ್ದರೆ ಅದಕ್ಕೆ ಕಾರಣಗಳೇನೂ? ಇವೆಲ್ಲವುಗಳ ಮೇಲೆ ಲೆಕ್ಕಪರಿಶೋಧನಾ ವರದಿ ಬೆಳಕು ಚೆಲ್ಲುತ್ತದೆ.

ಅವುಗಳ ಮೇಲೆ ಸಹಕಾರಿಯ ಸಾಮಾನ್ಯ ಸಭೆ ಸದಸ್ಯರಿಗೆ, ಹಿತಚಿಂತಕರಿಗೆ ಚರ್ಚಿಸಲು, ಅವಶ್ಯವಿದ್ದಲ್ಲಿ ಚಿಂತೆ ಮಾಡಲು ಅವಕಾಶ ಒದಗಿಸುತ್ತದೆ. ಇವೆಲ್ಲವುಗಳಿಂದ ಸಂಸ್ಥೆಯು ಯಾವ ದಾರಿಯಲ್ಲಿ ಸಾಗುತ್ತಿದೆ ಎಂಬುದು ಕಂಡು ಬರುತ್ತದೆ ಮತ್ತು ನಿರ್ದೇಶಕ ಮಂಡಳಿಯವರು ಸಂಸ್ಥೆಯ ಆಗು ಹೋಗುಗಳ ಬಗ್ಗೆ, ಏರು ಪೇರುಗಳ ಬಗ್ಗೆ, ಬೆಳವಣಿಗೆಗಳ ಬಗ್ಗೆ ಇರುವ ಆಸಕ್ತಿ ತಿಳಿದು ಬರುತ್ತದೆ. ಅದಲ್ಲದೇ ಅವರು ಸಂಸ್ಥೆಯ ಅಭಿವೃದ್ಧಿ ವಿಷಯದಲ್ಲಿ ಅವರಲ್ಲಿ ದೂರದೃಷ್ಟಿ ಇದೆಯೋ ಅಥವಾ ಇಲ್ಲವೋ ಎಂಬುದು ತಿಳಿದು ಬರುತ್ತದೆ. ಆದ್ದರಿಂದ ಲೆಕ್ಕಪರಿಶೋಧನಾ ವರದಿಗೆ ಕನ್ನಡಿ ಎಂದು ಕರೆಯುವುದುಂಟು. ಸಹಕಾರಿಯು ತನ್ನ ವ್ಯವಹಾರಗಳ ಬಗ್ಗೆ ಚೆನ್ನಾಗಿ ಲೆಕ್ಕಪರಿಶೋಧನೆ ಮಾಡಿ ಪರಿಶೋಧನೆ ವರದಿಯ ಮುಖಾಂತರ ತನ್ನ ಲೋಪದೋಷಗಳನ್ನು ತಿಳಿದುಕೊಂಡು ಅವುಗಳನ್ನು ತಿದ್ದುಪಡಿ ಮಾಡಿಕೊಂಡು ಹಾಗೂ ಲೆಕ್ಕಪರಿಶೋಧಕರು ಹೇಳಿದ ಸಲಹೆ ಸೂಚನೆ ಹಾಗೂ ಮಾರ್ಗದರ್ಶನಗಳನ್ನು ಅನುಸರಿಸಿದರೆ ಅಂತಹ ಸಂಸ್ಥೆಯು ನಿಶ್ಚಿತವಾಗಿ ಅಭಿವೃದ್ಧಿ ಪಥದಲ್ಲಿ ಮುಂದೆ ಸಾಗುತ್ತದೆ.

ಮುಂದಿನ ಸಂಚಿಕೆಗೆ...

## ಲೆಕ್ಕಪರಿಶೋಧಕರ ನೇಮಕಾತಿ ಹಾಗೂ ಅವರ ಸಂಭಾವನೆಯನ್ನು ನಿಗದಿಪಡಿಸುವುದು

ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಬೆಂಗಳೂರು (ಇನ್ನೂ ಮುಂದೆ ಸಂಯುಕ್ತ ಸಹಕಾರಿ ಎಂದು ಸಂಭೋದಿಸಲಾಗುವುದು) ಇವರು ಕರ್ನಾಟಕ ಸೌಹಾರ್ದ ಸಹಕಾರಿ ಕಾನೂನು 1997 (ಇನ್ನೂ ಮುಂದೆ ಕಾನೂನು ಎಂದು ಸಂಭೋದಿಸಲಾಗುವುದು)ರ ಕಲಂ 53 (7) (ಚ) ರ ಅಡಿ ತಮಗೆ ಇರುವ ಶಾಸನಬದ್ಧ ಅಧಿಕಾರದ ಮೇರೆಗೆ ತಯಾರಿಸಿದ ಆಡಿಟರರ ಮತ್ತು ಚಾರ್ಟರ್ಡ್ ಅಕೌಂಟಂಟರ ಯಾದಿಯಲ್ಲಿ (List of Empanelment of Auditors and Chartered Accountants) ಹೆಸರು ಹೊಂದಿದವರ ಪೈಕಿ ಲೆಕ್ಕ ಪರಿಶೋಧಕರನ್ನು ಪ್ರತಿವರ್ಷ ಜರುಗುವ ಸಾಮಾನ್ಯ ಸಭೆಯಲ್ಲಿ ಸಹಕಾರಿ ವರ್ಷದ ಲೆಕ್ಕಪರಿಶೋಧನೆಗೆ ನೇಮಿಸಿಕೊಳ್ಳಬೇಕಾಗುತ್ತದೆ.



ಕಾನೂನು ಕಲಂ 33 (4) ರ ಪ್ರಕಾರ ಸಹಕಾರಿಯ ನಿರ್ದೇಶಕ ಮಂಡಳಿಯು ಅವರ ಸಂಭಾವನೆಯನ್ನು ಗೊತ್ತುಪಡಿಸಬೇಕು. ಯಾವುದೇ ಕಾರಣಕ್ಕೆ ಸಾಮಾನ್ಯ ಸಭೆಯು ತನಗಿದ್ದ ಲೆಕ್ಕಪರಿಶೋಧಕರ ನೇಮಕಾತಿ ಅಧಿಕಾರವನ್ನು ನಿರ್ದೇಶಕ ಮಂಡಳಿಗೆ ವಹಿಸಲು ಬರುವುದಿಲ್ಲ.

ಸಹಕಾರಿಯು ನಂತರ 15 ದಿವಸಗಳಲ್ಲಿ ಲೆಕ್ಕಪರಿಶೋಧಕರಿಗೆ ಅವರ ನೇಮಕಾತಿ ಬಗ್ಗೆ ಹಾಗೂ ಅವರಿಗೆ ಸದರಿ ಕೆಲಸಕ್ಕಾಗಿ ನಿಗದಿಪಡಿಸಿದ ಸಂಭಾವನೆ ಗೊತ್ತುಪಡಿಸಲು ತಿಳುವಳಿಕೆ ಪತ್ರವನ್ನು ಕಳುಹಿಸಬೇಕು.

ಯಾವುದೇ ಕಾಲಕ್ಕೂ ಹಾಗೂ ಯಾವುದೇ ಕಾರಣಕ್ಕೂ ಸಹಕಾರಿಯು ತನ್ನ ಲೆಕ್ಕಪರಿಶೋಧನೆಗಾಗಿ ಸಂಯುಕ್ತ ಸಹಕಾರಿಯು ಪ್ರಕಟಿಸಿದ ಲೆಕ್ಕಪರಿಶೋಧಕರ ಯಾದಿಯಲ್ಲಿ ಹೆಸರಿಲ್ಲದ ಲೆಕ್ಕಪರಿಶೋಧಕರನ್ನು ನೇಮಿಸತಕ್ಕದ್ದಲ್ಲ.

ಹಾಗೆ ನೇಮಿಸಿ ಲೆಕ್ಕಪರಿಶೋಧನೆ ಮಾಡಿಕೊಂಡಲ್ಲಿ ಅಂತಹ ಲೆಕ್ಕಪರಿಶೋಧನಾ ವರದಿಯು ಅಸಿಂಧು ಎಂದು ಸಂಯುಕ್ತ ಸಹಕಾರಿಯ ಪರಿಪತ್ರದ ಪ್ರಕಾರ ಪರಿಗಣಿಸಲಾಗುತ್ತದೆ. ಅಂತಹ ಪ್ರಸಂಗದಲ್ಲಿ ಸಹಕಾರಿಯು ಸಂಯುಕ್ತ ಸಹಕಾರಿಯು ಪ್ರಕಟಿಸಿದ ಪಟ್ಟಿಯಲ್ಲಿಯ ಹೆಸರುಳ್ಳ ಅಧಿಕೃತವಾದ ಲೆಕ್ಕಪರಿಶೋಧಕರಿಂದ ದುಬಾರಿ ಫೀ ಕೊಟ್ಟು ಲೆಕ್ಕಪರಿಶೋಧನೆ ಮಾಡಿಕೊಳ್ಳಬೇಕಾಗುತ್ತದೆ. ಒಂದು ವೇಳೆ ಸಹಕಾರಿಯು ಹಾಗೆ ಮಾಡದಿದ್ದಲ್ಲಿ ಸದರಿ ಸಂಸ್ಥೆಯ ಲೆಕ್ಕಪರಿಶೋಧನೆ ಆಗಿಲ್ಲವೆಂದು ಪರಿಗಣಿಸಿ ಸಂಯುಕ್ತ ಸಹಕಾರಿಯು ಕಾಯ್ದೆ ಕಲಂ 33(7) ರ ಅನ್ವಯ ತನಗಿರುವ ಜವಾಬ್ದಾರಿಯ ನಿರ್ವಹಣೆಗೆ ತಾನೇ ಒಬ್ಬ ಲೆಕ್ಕಪರಿಶೋಧಕರನ್ನು ಕೆಲಸಕ್ಕಾಗಿ ನೇಮಿಸಿ ಸಹಕಾರಿಗೆ ತಿಳಿಸುತ್ತದೆ. ಆಗ ಸಂಯುಕ್ತ ಸಹಕಾರಿಯು ನಿಗದಿಪಡಿಸಿದ ಫೀಯನ್ನು ಹಾಗೇ ನೇಮಿಸಿದ ಲೆಕ್ಕಪರಿಶೋಧಕರಿಗೆ ಕೊಟ್ಟು ತಮ್ಮ ಸಂಸ್ಥೆಯ ಲೆಕ್ಕಪರಿಶೋಧನೆಯನ್ನು ಮಾಡಿಕೊಳ್ಳಬೇಕಾಗುತ್ತದೆ.

10) ಸಹಕಾರಿಯ ಒಟ್ಟು ಉತ್ಪನ್ನಗಳು, ಖರ್ಚುಗಳು ಹಾಗೂ ಅವುಗಳ ವಿವರಗಳು, ಸಹಕಾರಿಯು ಗಳಿಸಿದ ನಿವ್ವಳ ಲಾಭ/ಅನುಭವಿಸಿದ ನಷ್ಟಗಳು.

11) ಸಹಕಾರಿಯು ಹೊಂದಿದ ಸದಸ್ಯತ್ವ, ಶೇರು ಬಂಡವಾಳ.

12) ಸಹಕಾರಿಯು ಹೊಂದಿದ ಕಾಯ್ದಿಟ್ಟ ಹಾಗೂ ಇತರ ನಿಧಿಗಳು ಹಾಗೂ ಅವುಗಳ ಹೂಡಿಕೆಗಳು.

13) ಸಹಕಾರಿಯ ಶಾಖೆಗಳು ಹಾಗೂ ಅವುಗಳ ಪ್ರಗತಿ ಚಿತ್ರಣ.

14) ಸಹಕಾರಿಗೆ ವರದಿ ವರ್ಷದಲ್ಲಿ ಉತ್ತಮ ಪ್ರಗತಿಗಾಗಿ ದೊರೆತ ಬಹುಮಾನಗಳು/ಪ್ರಶಸ್ತಿ ಪತ್ರಗಳು.

15) ಸಹಕಾರಿಯಲ್ಲಿ ವರದಿ ವರ್ಷದಲ್ಲಿ ನಡೆದ ಅವ್ಯವಹಾರಗಳು, ಅವುಗಳ ವಿವರಗಳು, ಅವ್ಯವಹಾರಗಳು ಆಗಲು ಕಾರಣಗಳು ಹಾಗೂ ಅವ್ಯವಹಾರ ಮಾಡಿದ ವ್ಯಕ್ತಿಗಳ ಹೆಸರು, ಆಡಳಿತ ಮಂಡಳಿಯ/ನೌಕರರ ಜೊತೆಗೆ ಇರುವ ಅವ್ಯವಹಾರ ಮಾಡಿದವರ ಸಂಬಂಧಗಳು, ಅವುಗಳ ಮೇಲೆ ಆಡಳಿತ ಮಂಡಳಿಯು ಕೈಕೊಂಡ ಕ್ರಮಗಳು, ಕ್ರಮಗಳಲ್ಲಿಯ ಪ್ರಗತಿಗಳು

16) ಸಹಕಾರಿಯ ವ್ಯವಹಾರದಲ್ಲಿ ಹೋದ ವರ್ಷಕ್ಕಿಂತ ವರದಿ ವರ್ಷದಲ್ಲಿ ಈ ಕೆಳಗಿನ ಅಂಶಗಳ ಮೇಲೆ ಹೊಂದಿದ ಪ್ರಗತಿ ಕಡಿತದ ಚಿತ್ರಣ.

- ಅ) ಠೇವುಗಳ ಬೆಳವಣಿಗೆ/ಕಡಿತ
- ಆ) ಶೇರು ಬಂಡವಾಳದಲ್ಲಿ ಹೆಚ್ಚಳ/ಕಡಿತ
- ಇ) ಸಾಲಗಳ ಹೆಚ್ಚಳ/ಕಡಿತ
- ಈ) ಉತ್ಪನ್ನಗಳಲ್ಲಿ ಹೆಚ್ಚಳ/ಕಡಿತ
- ಉ) ನಿವ್ವಳ ಲಾಭದಲ್ಲಿ ಹೆಚ್ಚಳ/ಕಡಿತ
- ಊ) ವಹಿವಾಟಿನಲ್ಲಿ ಹೆಚ್ಚಳ/ಕಡಿತ
- ಋ) ಆಸ್ತಿಗಳಲ್ಲಿ ಹೆಚ್ಚಳ/ಕಡಿತ
- ೠ) ಸಹಕಾರಿ ಹಾಕಿದ ಯೋಜನೆಗಳು ಹಾಗೂ ಅವುಗಳ ಅನುಷ್ಠಾನದಲ್ಲಿ ಬೆಳವಣಿಗೆ/ಕುಂಠಿತ
- ಎ) ಗ್ರಾಹಕ ಸಂಖ್ಯೆಯಲ್ಲಿ ಏರಿಕೆ/ಇಳಿಕೆ
- ಏ) ಸೇವೆಯ ಬಗ್ಗೆ ಗ್ರಾಹಕರ ಅಭಿಪ್ರಾಯ-ಪರ/ವಿರುದ್ಧ



ರಾಷ್ಟ್ರದ ಸೌಹಾರ್ದ ಸಹಕಾರಿಗಳ ಪ್ರಗತಿ ಪರಿಶೀಲನಾ ಕಾರ್ಯಾಗಾರ



# ಸ್ವಾಯತ್ತ ಸೌಹಾರ್ದ ಸಹಕಾರ ಸಂಘಗಳಿಂದ ಹಣಕಾಸಿನ ಮುಗ್ಗಟ್ಟು ನಿವಾರಣೆ ಸಾಧ್ಯ

**ಡಾ. ವೈ. ವಿ. ರೆಡ್ಡಿ**
ಆರ್.ಬಿ.ಐ. ನಿವೃತ್ತ ಗವರ್ನರ್

ರಾಷ್ಟ್ರದಲ್ಲಿ ಸ್ವಾಯತ್ತ ಸೌಹಾರ್ದ ಸಹಕಾರಿ ಕಾಯ್ದೆಗಳ ಬೆಳವಣಿಗೆ ಹಾಗೂ ಸ್ಥಿತಿಗತಿಗಳನ್ನು ಅಧ್ಯಯನ ಮಾಡುವುದಕ್ಕಾಗಿ ಎಲ್‌ಸಿ ಹೈದರಾಬಾದ್ ಇವರ ನೇತೃತ್ವದಲ್ಲಿ ನಡೆದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ರಿಸರ್ವ್ ಬ್ಯಾಂಕಿನ ನಿವೃತ್ತ ಗವರ್ನರ್ ಡಾ.ವೈ.ವಿ.ರೆಡ್ಡಿಯವರು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಅಪಾರ ಕೊಡುಗೆ ನೀಡುತ್ತಿರುವ ಸೌಹಾದ್ ಸಹಕಾರ ಚಳುವಳಿಯಲ್ಲಿ ಕಳೆದ ಒಂದು ದಶಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಾಯತ್ತ ಸೌಹಾರ್ದ ಸಹಕಾರ ಸಂಘಗಳೂ ಸಹ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ. ಸಾರ್ವಜನಿಕರು ಹಾಗು ಸರಕಾರಗಳು ಇವುಗಳಿಗೆ ಮಾನ್ಯತೆ ನೀಡುತ್ತಿವೆಯಾದ್ದರಿಂದ ಇವುಗಳಿಂದ ಹಣಕಾಸಿನ ಮುಗ್ಗಟ್ಟು ನಿವಾರಣೆ ಸಾಧ್ಯ ಎಂದು ತಿಳಿಸಿದರು. ಮುಂದುವರೆದು ಮಾತನಾಡುತ್ತ ಹಳೆಯ ಹಾಗು ಹೊಸ ಬಗೆಯ ಎರಡು ಸಹಕಾರಿ ಕಾಯ್ದೆಗಳು ಮುಂದುವರೆಯಬೇಕು ಎಂದು ತಿಳಿಸಿದರು.

ಪ್ರಾರಂಭದಲ್ಲಿ ಎಎಲ್‌ಸಿಯ ಅಧ್ಯಕ್ಷರಾದ ಶ್ರೀ ವಿನೋದರೆಡ್ಡಿಯವರು ಮಾತನಾಡಿ ದೇಶದ 9 ರಾಜ್ಯಗಳಲ್ಲಿ (ಆಂಧ್ರಪ್ರದೇಶ, ಕರ್ನಾಟಕ, ಮಧ್ಯಪ್ರದೇಶ, ಛತ್ತೀಸಗಡ, ಜಾರ್ಖಂಡ, ಜಮ್ಮುಕಾಶ್ಮೀರ, ಬಿಹಾರ, ಒಡಿಸ್ಸಾ ಹಾಗು ಉತ್ತರಖಂಡ) ಈ ಸ್ವಾಯತ್ತ ಸೌಹಾರ್ದ ಸಹಕಾರಿ ಕಾಯ್ದೆಗಳು ಜಾರಿಯಲ್ಲಿವೆ. ರಾಷ್ಟ್ರದ ಈ 9 ರಾಜ್ಯಗಳಲ್ಲಿ ಇದುವರೆಗೆ 67,755 ಕಾರ್ಯನಿರ್ವಹಿಸುತ್ತಿವೆ. ಸಹಕಾರಿಗಳು ರಾಷ್ಟ್ರಾದ್ಯಂತ ಈ ಸೌಹಾರ್ದ ಸಹಕಾರಿಯ ಕಾರ್ಯಾಚರಣೆ ಪ್ರಾರಂಭಿಸಬೇಕಿದೆ. ಕಾರ್ಯಾಚರಣೆಯಿರುವ ರಾಜ್ಯಗಳಲ್ಲಿ ಈ ಕಾಯ್ದೆಯ ಕಾರ್ಯಾಚರಣೆ ಹಾಗು ಪ್ರಗತಿಯ ಪರಾಮರ್ಶೆಯಾಗಬೇಕಿದೆ. ಅದಕ್ಕಾಗಿ ಈ ಕಾರ್ಯಾಗಾರವನ್ನು ವ್ಯವಸ್ಥೆಮಾಡಲಾಗಿದೆ ಎಂದು ತಿಳಿಸಿದರು. ದೇಶದಲ್ಲಿ ಸ್ವಾಯತ್ತ ಸೌಹಾರ್ದ ಸಹಕಾರಿ ಕಾಯ್ದೆಯ ವ್ಯಾಪಕ ಪ್ರಚಾರಕ್ಕಾಗಿ ಕಾರ್ಯಯೋಜನೆಯ ಅಗತ್ಯ ಇದೆ ಎಂದು ತಿಳಿಸಿದರು. ಕರ್ನಾಟಕದಿಂದ ಸಂಯುಕ್ತ ಸಹಕಾರಿಯ ಉಪಾಧ್ಯಕ್ಷ ಶ್ರೀ ಗುರುನಾಥ ಜ್ಯಾಂತಿಕರ (ಕಲ್ಯಾಣ ಪತ್ತಿನ ಸೌಹಾರ್ದ ಸಹಕಾರಿ ಬೀದರ) ನಿರ್ದೇಶಕ ಶ್ರೀ ಭಾಸ್ಕರ ಹೆಗಡೆ ಕಾಗೇರಿ(ವಿಜಯಲಕ್ಷ್ಮಿ ಸೌಹಾರ್ದ ಸಹಕಾರಿ ಶಿರಸಿ) ಸಹಕಾರ ಸಂಘಗಳ ನಿವೃತ್ತ ಅಪರ ನಿಬಂಧಕ ಶ್ರೀ ಸಿ.ಎನ್. ಪರಶಿವಮೂರ್ತಿ ವ್ಯವಸ್ಥಾಪಕ ನಿರ್ದೇಶಕ ಶ್ರೀ ಶರಣಗೌಡ ಪಾಟೀಲ್ ಉಪಪ್ರಧಾನ ವ್ಯವಸ್ಥಾಪಕ ಶ್ರೀ ನಾರಾಯಣ ಹೆಗಡೆ ತರಬೇತಿ ಅಧಿಕಾರಿ ಶ್ರೀ ವಿ.ಜೆ.ಕಾರಕೂನ ಕಾನೂನು ವಿಭಾಗದ ಅಧಿಕಾರಿ ಶ್ರೀ ಶ್ರೀಕಾಂತ, ಬಸವೇಶ್ವರ ಸೌಹಾರ್ದ ಸಹಕಾರಿ ಸಿಂಧನೂರ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ರಾಜಶೇಖರ ರವರುಗಳು ಭಾಗವಹಿಸಿದ್ದರು. ಒಟ್ಟಾರೆ ಈ ಕಾರ್ಯಾಗಾರದಲ್ಲಿ ದೇಶದ 9 ರಾಜ್ಯಗಳಿಂದ 67 ಪ್ರತಿನಿಧಿಗಳು ಭಾಗವಹಿಸಿದ್ದರು. ನಂತರ 4 ತಂಡಗಳಲ್ಲಿ ನಡೆದ ಚರ್ಚಾಗೋಷ್ಠಿಯ ನಂತರ ಕಾರ್ಯಯೋಜನೆಯನ್ನು ರಚಿಸಲಾಯಿತು.




## ಕಾರ್ಯಯೋಜನೆಯ ಪ್ರಮುಖ ಅಂಶಗಳು

- ರಾಷ್ಟ್ರ ಮಟ್ಟದಲ್ಲಿ "ಕ್ರಿಯಾಶೀಲ ಜಾಗೃತ ತಂಡ ರಚಿಸಿ" ಸಂವಿಧಾನದಲ್ಲಿ ಸಹಕಾರ ಕ್ಷೇತ್ರದ ಕೆಲವು ವಿಷಯಗಳನ್ನು ಅಳವಡಿಸಲು ಕ್ರಮವಿಡಬೇಕು.
- ಲೋಕಸಭಾ ಸದಸ್ಯರಿಗೆ ರಾಜ್ಯ ಸಭಾ ಸದಸ್ಯರಿಗೆ ರಾಜ್ಯಗಳ ಶಾಸಕರಿಗೆ ಈ ಬಗ್ಗೆ ಮಾಹಿತಿ ನೀಡುವ ಪ್ರಭಾವ ಬೀರುವ ಪರಿಣಾಮಕಾರಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು
- ಎಲ್ಲ ರಾಜ್ಯಗಳಲ್ಲೂ ರಾಜ್ಯಮಟ್ಟದ ಸೌಹಾರ್ದ ಸಹಕಾರಿ ಫೆಡರೇಶನ್ ಸ್ಥಾಪಿಸಬೇಕು.
- ರಾಷ್ಟ್ರಮಟ್ಟದಲ್ಲಿ ಒಂದು ಸೌಹಾರ್ದ ಸಹಕಾರಿ ಫೆಡರೇಶನ್ ಸ್ಥಾಪಿಸಬೇಕು.
- ರಾಜ್ಯ ಸರಕಾರಗಳ ಸಹಕಾರ ಇಲಾಖಾಧಿಕಾರಿಗಳಿಗೂ ಈ ಬಗ್ಗೆ ಮಾಹಿತಿ ಹಾಗೂ ತರಬೇತಿ ನೀಡಬೇಕು.
- ಶಿಕ್ಷಣ ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಎಲ್ಲ ಹಂತಗಳಲ್ಲೂ ಪರಿಣಾಮಕಾರಿಯಾಗಿ ಹಮ್ಮಿಕೊಳ್ಳಬೇಕು.
- ಹಳೆಯ ಹಾಗು ಹೊಸ ಈ ಎರಡು ಕಾಯ್ದೆಗಳ ಕಾರ್ಯಾಚರಣೆಗೆ ಅವಕಾಶವಿರಬೇಕು.
- ಸ್ವಾಯತ್ತ ಸೌಹಾರ್ದ ಸಹಕಾರಿಗಳ ಬೆಳವಣಿಗೆಗೆ ಹೊಸ ಹೊಸ ಕ್ಷೇತ್ರಗಳ ಆವಿಷ್ಕಾರ ಮಾಡಬೇಕು.
- ಕಾಯ್ದೆ ಜಾರಿ ಇರದ ರಾಜ್ಯಗಳಲ್ಲಿ ಈ ಕಾಯ್ದೆ ಜಾರಿಗೆ ಪ್ರಚಾರ ನೀಡಬೇಕು. ಜಾರಿಗೆ ಆಗ್ರಹಿಸಬೇಕು.

## ಸೌಹಾರ್ದ ಸಹಕಾರಿಗಳ ಮಾಹಿತಿಗಾಗಿ ಸಹಕಾರಿಯ ಸಂಪರ್ಕ ದೂರವಾಣಿಗಳು

| | | |
|---|---|---|
| ಅಧ್ಯಕ್ಷ | ಶ್ರೀ ಎಸ್. ಆರ್. ಸತೀಶಚಂದ್ರ | 9448696108 |
| ಉಪಾಧ್ಯಕ್ಷ | ಶ್ರೀ ಗುರುನಾಥ ಜ್ಯಾಂತಿಕರ | 9448270104 |
| ವ್ಯವಸ್ಥಾಪಕ ನಿರ್ದೇಶಕ | ಶ್ರೀ ಶರಣಗೌಡ ಜಿ. ಪಾಟೀಲ | 9740401685 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ನಾರಾಯಣ ಹೆಗಡೆ | 9480579882 |
| ಉಪ ಪ್ರಧಾನ ವ್ಯವಸ್ಥಾಪಕ | ಶ್ರೀ ವೈ. ಕುಮಾರ | 9845893455 |
| ತರಬೇತಿ ಅಧಿಕಾರಿ | ಶ್ರೀ ವಿ.ಜೆ. ಕಾರಕೂನ | 9482734077 |
| ಬೆಳಗಾವಿ ವಿಭಾಗಾಧಿಕಾರಿ | ಶ್ರೀ ಜೆ.ಎಸ್. ಟೋಪಣ್ಣನವರ್ | 9916367887 |

ಬೆಳಗಾವಿ ವಿಭಾಗೀಯ ಕಛೇರಿಯ ವಿಳಾಸ : ನಂ.436, ಹುಯಿಲಗೋಳ ಕಾಂಪ್ಲೆಕ್ಸ್, ಶಿವಗಲ್ಲಿ, ಬೆಳಗಾವಿ – 1. ದೂ. 0831-2401551

ಇವರಿಂದ ಪ್ರಕಟಿತ :
ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ.,
ನಿರ್ಮಾಣ ಭವನ ಆವರಣ, ಡಾ. ರಾಜಕುಮಾರ ರಸ್ತೆ,
(ವಿವೇಕಾನಂದ ಕಾಲೇಜು ಎದುರು) ಒಂದನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು - 560010.
ದೂರವಾಣಿ ಸಂಖ್ಯೆಗಳು :
23376375/76/77/78/79/80 ಹಾಗೂ
23474408, 23573291
ಸಂಪಾದಕ, ಪ್ರಕಾಶಕ: ಶರಣಗೌಡ ಜಿ. ಪಾಟೀಲ,
ಸಂಚಿಕೆ ಸಿದ್ಧತೆ ವಿ.ಜೆ.ಕಾರಕೂನ
ಮುದ್ರಣ : ವೇಗ ಕಮ್ಯೂನಿಕೇಷನ್ಸ್, ಬೆಂಗಳೂರು.